|| ಶ್ರೀಃ ||

# ಶ್ರೀ ರಾಮಾನುಜಾಚಾರ್ಯರ ಸಂಕ್ಷಿಪ್ತ ಚರಿತ್ರೆ



ಶ್ರೀ ರಾಮಾನುಜಾಚಾರ್ಯರು

ಪ್ರಕಾಶಕರು :

ಭಕ್ತಸುಧಾ ಪ್ರತಿಷ್ಠಾನ, ಮೇಲುಕೋಟೆ

ಶ್ರೀ ರಾಮಾನುಜರ ಸಂಕ್ಷಿಪ್ತ ಚರಿತ್ರೆ : ಈ ಪುಸ್ತಕದ ಲೇಖಕರು ಎಂ. ಎ. ಶಿಂಗಮ್ಮಾಳ್. ಭಕ್ತಿಸುಧಾ ಪ್ರತಿಷ್ಠಾನ ಇವರಿಂದ ಪ್ರಕಾಶಿತವಾಗಿದೆ. ರಾಮಾನುಜರ ಜೀವನ ಚರಿತ್ರೆಯನ್ನು ಸಂಗ್ರಹಿಸಲಾಗಿದೆ.

ಪುಟಗಳು : 30

ಪ್ರತಿಗಳು : 1000

ಬೆಲೆ : 15 ರೂಪಾಯಿಗಳು

ಪ್ರಕಾಶಕರು ಮತ್ತು ಪ್ರತಿ ದೊರೆಯುವ ಸ್ಥಳ

**ಭಕ್ತಿಸುಧಾ ಪ್ರತಿಷ್ಠಾನ**

ಮೇಲುಕೋಟೆ.

ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.

ಮುದ್ರಕರು :

ಜನಪದ ಸೇವಾ ಟ್ರಸ್ಟ್ ಮುದ್ರಣಾಲಯ, ಮೇಲುಕೋಟೆ.

# ಮುನ್ನುಡಿ

ಶ್ರೀ ರಾಮಾನುಜರು ವಿಶಿಷ್ಟಾದ್ವೈತ ವೇದಾಂತದ ಪ್ರವರ್ತಕರು
ಸಾಕ್ಷಾತ್ ಪರಮಾತ್ಮನಿಂದಲೇ ಪರಂಪರೆಯಾಗಿ ಇಲ್ಲಿಯುವರೆಗೂ ಬಂದಿರುವುದರಿಂದ
ಸಿದ್ಧಾಂತಕ್ಕೆ ಬಹಳ ಪ್ರಾಚೀನ ಪರಂಪರೆ ಇದೆ ಎನ್ನಬಹುದು. ಪರಮಾತ್ಮ
ನಿಂದ ಯಾಮುನ ಮುನಿವರೆಗಿನ ಆಚಾರ್ಯರ ನಂತರ ಕಡೆಯುವರಾಗಿಯೂ ನಂತರ
ಮಣವಾಳಮಾಮುನಿಯುವರೆಗೆ ಪ್ರಥಮರಾಗಿಯೂ ಇರುವುದರಿಂದ ಇವರು
ಮಧ್ಯಮಣಿಯಾಗಿ ಪ್ರಕಾಶಿಸಿರುತ್ತಾರೆ. ಅಲ್ಲಿ ಶ್ರೀ ಶಂಕರರು ಬ್ರಹ್ಮ ಸತ್ಯಂ, ಜಗ
ನ್ಮಿಥ್ಯಾ ಎಂಬ ಆಧಾರದ ಮೇಲೆ ಸಿದ್ಧಾಂತ ಸ್ಥಾಪನೆ ಮಾಡಿದರೆ ಇವರು
ಅದನ್ನು ಪರಿಷ್ಕರಿಸಿ ಜಗತ್ತೂ ಸತ್ಯ, ಅದೂ ಬ್ರಹ್ಮನಲ್ಲಿಯೇ ಅಡಗಿದೆ
ಎಂದೂ ಮುಕ್ತಿಯು ವಿಚಾರದಲ್ಲಿ ಶ್ರೀಶಂಕರರು ಜೀವನ್ಮುಕ್ತಿಯನ್ನ ಪ್ರತಿ
ಪಾದಿಸಿದರೆ ಇವರು ಮೋಕ್ಷವೆಂಬ ಪ್ರತ್ಯೇಕ ಸಾಮ್ರಾಜ್ಯವನ್ನು ಜಗತ್ತಿಗೆ
ತೋರಿಸಿಕೊಟ್ಟರು. ಆರ್ಚಿರಾದಿ ನಡೆಯಲ್ಲಿ ಹೋಗುವ ಮುಕ್ತನು ಪರಮಾ
ತ್ಮನ ಸಾಮ್ರಾಜ್ಯದ ಪ್ರಜೆಯಾಗುತ್ತಾನೆ. ಪರಮಾತ್ಮನು ಅಖಿಲಹೇಯ
ಪ್ರತ್ಯನೀಕ ಕಲ್ಯಾಣೈಕತಾನ. ಅಂದರೆ ಎಲ್ಲ ವಿಧವಾದ ಕಲ್ಯಾಣಗುಣಗಳು
ಅವನಲ್ಲಿವೆ. ಯಾವ ವಿಧವಾದ ಕೆಟ್ಟ ಗುಣಗಳೂ ಅವನಲ್ಲಿಲ್ಲ. ಅವನು
ಲೀಲಾವಿಭೂತಿ (ಭೂಲೋಕ) ನಿತ್ಯವಿಭೂತಿ (ವೈಕುಂಠ) ಹೀಗೆ ಉಭಯ
ವಿಭೂತಿ ನಾಯಕ ಅವನನ್ನು ಪಡೆಯುವುದೇ ನಮ್ಮ ಜೀವನದ ಮುಖ್ಯ
ಗುರಿ. ಅದಕ್ಕಾಗಿ ಪ್ರಯತ್ನ ಪಡಬೇಕು. ಅವನ ಕೃಪೆ ಬಂದ ತಕ್ಷಣ ಮೋಕ್ಷ
ಸಿಕ್ಕಿದಂತೆಯೇ. ಈ ತತ್ತ್ವವನ್ನು ಪರಮಗುರಿಯನ್ನಾಗಿ ಇಟ್ಟುಕೊಂಡು
ಶ್ರೀ ರಾಮಾನುಜರು ಕ್ಷೇತ್ರಯಾತ್ರೆ ಮಾಡಿ ಸಿದ್ಧಾಂತ ಪ್ರಚಾರ ಮಾಡಿ
ದರು. ಇವರ ಜೀವನದಲ್ಲಿ ಕಷ್ಟಗಳನ್ನು ಅನುಭವಿಸಿದರು. ಸಿದ್ಧಾಂತಕ್ಕೆ
ಮುಖ್ಯವಾದ ದಿವ್ಯ ಪ್ರಬಂಧಾಮೃತಪಾನ ಮಾಡಿ ಬ್ರಹ್ಮಸೂತ್ರದಲ್ಲಿ ಕ್ಲಿಷ್ಟ
ಕರವಾದ ಪ್ರಸಂಗಗಳಲ್ಲಿ ಅರ್ಥನಿರ್ವಾಹವನ್ನು ಮಾಡಿದರು. ಮಹಾ ತಿರುಮಂತ್ರ
ವನ್ನು ಶ್ರೀರಂಗದ ಗೋಪುರದ ಮೇಲೆ ಘೋಷಿಸಿ ಎಲ್ಲ ಜನರಿಗೂ ಮೋಕ್ಷ
ಮಾರ್ಗವನ್ನುಪದೇಶಿಸಿದರು. ಈ ವಿಷಯದಲ್ಲಿ ಆಚಾರ್ಯಾಜ್ಞೆಯನ್ನು ಉಲ್ಲಂಘನೆ
ಮಾಡಿದುದು. ತನ್ನೊಬ್ಬನ ನರಕಪ್ರಾಪ್ತಿಯಿಂದ ಲೋಕವೆಲ್ಲಾ ಮುಕ್ತವಾ
ಗುವುದನ್ನು ಕೇಳಿ ಸಂತೋಷಪಡುವುದಕ್ಕಾಗಿಯೇ. ಇವರು ಕರ್ನಾಟಕದಲ್ಲಿಯೂ
ಹತ್ತಾರು ಕ್ಷೇತ್ರಗಳಲ್ಲಿ ಸಂಚಾರ ಮಾಡಿದರು. ಇವುಗಳಲ್ಲಿ ತೊಂಡನೂರು,
ಸಾಲಿಗ್ರಾಮ, ಮೇಲುಕೋಟೆ ಮುಂತಾದುವು ಪ್ರಸಿದ್ಧವಾದುವು. ಇವರ
ಜೀವನಚರಿತ್ರೆ ವಿಸ್ತಾರವಾದುದು. ಅಘಟಿತ ಘಟನೆಗಳಿಂದ ಕೂಡಿದ. ಇವರ
ಸಂಪೂರ್ಣವಾದ ವಿವರವಾದ ಚರಿತ್ರೆಯನ್ನು ಅನೇಕರು ಬರೆದಿರುತ್ತಾರೆ.
ಆದರೆ ಸಂಕ್ಷಿಪ್ತವಾಗಿ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಉದ್ದೇಶ
ದಿಂದ ಈ ಕಿರುಚರಿತ್ರೆಯನ್ನು ಮುದ್ರಿಸಲಾಗಿದೆ. ಶ್ರೀಮತಿ ಎಂ. ಎ.
ಶಿಂಗಮ್ಮಾಳ್‌ರವರು ಅನೇಕ ಲೇಖನಗಳನ್ನು ಬರೆದಿರುತ್ತಾರೆ.

ವಿಶಿಷ್ಟಾದ್ವೈತಸಿದ್ಧಾಂತದ ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿರುತ್ತಾರೆ. ಇವರಿಗೆ ಭಕ್ತಿಸುಧಾ ಪ್ರತಿಷ್ಠಾನವು ವಂದನೆಗಳನ್ನು ಸಲ್ಲಿಸುತ್ತದೆ. ಇದಕ್ಕೆ ಧನ ಸಹಾಯ ಮಾಡಿದ ಮಹನೀಯರುಗಳಿಗೂ ಇದನ್ನು ಅಂದವಾಗಿ ಮುದ್ರಿಸಿ ಕೊಟ್ಟ ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದ ಕಾರ್ಯಕರ್ತರಿಗೂ ಕೃತಜ್ಞತೆಗಳು.

ಸಂ.

ಭಕ್ತಿಸುಧಾ ಪ್ರತಿಷ್ಠಾನ
ಮೇಲುಕೋಟೆ

# ಶ್ರೀ ರಾಮಾನುಜಾಚಾರ್ಯರ ಸಂಕ್ಷಿಪ್ತ ಚರಿತ್ರೆ

ಎಂ. ಎ. ಲಿಂಗಮ್ಮಾಳ್

# ೧

## ಶ್ರೀ ರಾಮಾನುಜರ ಜನನ ಮತ್ತು ವಿದ್ಯಾಭ್ಯಾಸ

**ಶ್ರೀ** ರಾಮಾನುಜರ ಅವತಾರವು ಭಗವದಂಶವೆಂದು ಹೇಳಬಹುದು. ಅವರು ಆದಿಕೇಶವ ಪೆರುಮಾಳ್ ದೇವಸ್ಥಾನವಿರುವ ಶ್ರೀಪೆರಂಬೂದೂರ್‌ನಲ್ಲಿ ಜನಿಸಿದರು. ಇವರ ತಂದೆ ಶ್ರೀ ಆಸೂರಿ ಕೇಶವಾಚಾರ್ಯರು. ದಯಾಪರರೂ, ಸತ್ಕುಲಪ್ರಸೂತರೂ ಆಗಿದ್ದರು. ಅನೇಕ ಯಜ್ಞಗಳನ್ನು ನಡೆಸಿ ಬ್ರಾಹ್ಮಣರಲ್ಲಿ ತಿಲಕ ಪ್ರಾಯರೆನಿಸಿದ್ದರು. ಯಾಮುನಾಚಾರ್ಯರ ಮುಖ್ಯ ಶಿಷ್ಯರಾಗಿದ್ದ ಶ್ರೀಶೈಲಪೂರ್ಣರ (ಪೆರಿಯನಂಬಿಗಳ) ಹಿರಿಯ ಸಹೋದರಿ ಕಾಂತಿಮತಿಯೊಂದಿಗೆ ಇವರ ವಿವಾಹವಾಯಿತು. ಇವರಿಗೆ ಬಹಳ ಕಾಲ ಸಂತಾನಭಾಗ್ಯ ಲಭಿಸಲಿಲ್ಲ. ಹಿರಿಯರ ಆದೇಶದಂತೆ ಕೇಶವಾಚಾರ್ಯರು ಪುತ್ರಕಾಮೇಷ್ಟಿಯಜ್ಞವನ್ನು ಮಾಡಲು ಅವರಿಗೆ ಸ್ವಪ್ನದಲ್ಲಿ ಪರಮಾತ್ಮನು ದರ್ಶನವಿತ್ತು ತಾನೇ ಆದಿಶೇಷನ ಅಂಶದಿಂದ ಅವರಿಗೆ ಪುತ್ರನಾಗಿ ಜನಿಸುವುದಾಗಿ ತಿಳಿಸಿದನು. ೯೩೯ನೇ ಶಕವರ್ಷದಲ್ಲಿ (ಕ್ರಿ.ಶ. ೧೦೧೭ರಲ್ಲಿ) ಪಿಂಗಳಸಂವತ್ಸರದ ಚೈತ್ರಶುದ್ಧ ಪಂಚಮಿ ಗುರುವಾರ ಆರಿದ್ರಾ ನಕ್ಷತ್ರದಲ್ಲಿ ಕಾಂತಿಮತಿಗೆ ಪುತ್ರಜನನವಾಯಿತು. ಕಾಂತಿಮತಿಯ ಸಹೋದರರಾದ ಶ್ರೀಶೈಲಪೂರ್ಣರು ಶ್ರೀ ಪೆರಂಬೂದೂರಿಗೆ ಬಂದು ದಿವ್ಯತೇಜಸ್ಸಿನಿಂದ ಮತ್ತು ಸರ್ವಲಕ್ಷಣಗಳಿಂದ ಕೂಡಿದ ಈ ಪುತ್ರರತ್ನಕ್ಕೆ "ಇಳೆಯಪೆರುಮಾಳ್" ಅಥವಾ ರಾಮಾನುಜನೆಂದು ನಾಮಕರಣ ಮಾಡಿದರು. ಶ್ರೀಶೈಲಪೂರ್ಣರ ಕಿರಿಯ ಸಹೋದರಿ ಮಹಾದೇವಿಗೆ ಕಮಲನ ಮಗ ಭಟ್ಟರೊಂದಿಗೆ ವಿವಾಹವಾಗಿ ಪುತ್ರಸಂತಾನವಾಯಿತು. ಅವಳ ಮಗುವಿಗೆ ಗೋವಿಂದನೆಂದು ನಾಮಕರಣ ಮಾಡಿದರು.

ರಾಮಾನುಜರು ದಿನೇದಿನೇ ಪ್ರವೃದ್ಧಮಾನರಾಗಿ ಬೆಳೆಯುತ್ತಿದ್ದರು. ಕಾಲಕ್ರಮದಲ್ಲಿ ಅವರಿಗೆ ಚೌಳೋಪನಯನಾದಿಗಳು ಜರುಗಿದವು. ಕೇಶವಾಚಾರ್ಯರು ಪಂಡಿತರಾಗಿದ್ದುದರಿಂದ ಅವರೇ ತಮ್ಮ ಮಗನಿಗೆ ವಿದ್ಯಾಭ್ಯಾಸವನ್ನು ಆರಂಭಿಸಿದರು. ಶ್ರೀರಾಮಾನುಜರು ಬಹು ಬೇಗ ಅವರ ೧೬ ನೇ ವಯಸ್ಸಿನಲ್ಲಿಯೇ ಸರ್ವವಿದ್ಯಾಪಾರಂಗತರಾಗಿ ಚಂದ್ರನಂತೆ ಪ್ರಕಾಶಿಸಿದರು. ಕೇಶವಾಚಾರ್ಯರು ಅವರಿಗೆ ಸತ್ಕುಲಪ್ರಸೂತಳಾದ 'ರಕ್ಷಕಾಂಬಾಳ್' ಎಂಬ ಕನ್ಯೆಯೊಂದಿಗೆ ವಿವಾಹವನ್ನು ನೆರವೇರಿಸಿದರು. ಅವಳಿಗೆ 'ಕಂಜಿಮಾಂಬಾಳ್' ಎಂದೂ ಹೆಸರಿದ್ದಿತು.

ಶ್ರೀರಾಮಾನುಜರಿಗೆ ವಿವಾಹವಾಗಿ ಕೆಲವು ಕಾಲದಲ್ಲಿಯೇ ಕೇಶವಾಚಾರ್ಯರು ದೇವರ ಪಾದಾರವಿಂದವನ್ನು ಸೇರಿದರು. ಇದರಿಂದ ಅತ್ಯಂತ ದುಃಖಭರಿತರಾದ ಶ್ರೀರಾಮಾನುಜರೂ ಅವರ ತಾಯಿಯವರೂ ತಮ್ಮ ದುಃಖ ಶಮನಕ್ಕಾಗಿ ಶ್ರೀ ಪೆರಂಬೂದೂರನ್ನು ಬಿಟ್ಟು ಕಾಂಚೀಪುರಕ್ಕೆ ಬಂದು ಸಂಸಾರ ಮಾಡಿದರು. ಕಾಲಕ್ರಮದಲ್ಲಿ ಮನಸ್ಸಿಗೆ ಸ್ವಲ್ಪ ಶಾಂತಿ ಉಂಟಾದ ಮೇಲೆ ರಾಮಾನುಜರು ವೇದಾಧ್ಯಯನ ಮತ್ತು ಉಪನಿಷತ್ತುಗಳ ವಿದ್ಯಾಭ್ಯಾಸವನ್ನು ಮುಂದುವರಿಸಿದರು.

ಆಗಿನ ಕಾಲದಲ್ಲಿ ಯಾದವ ಪ್ರಕಾಶರೆಂಬ ಸನ್ಯಾಸಿಯೊಬ್ಬರು ಅದ್ವೈತ ಸಿದ್ಧಾಂತವನ್ನು ಬೋಧಿಸುತ್ತಿದ್ದರು. ರಾಮಾನುಜರು ಅವರ ಶಿಷ್ಯರಾಗಿ ಅದ್ವೈತಸಿದ್ಧಾಂತವನ್ನು ಗ್ರಹಿಸಿಕೊಂಡು ಹಿಂದೂ ತತ್ತ್ವಶಾಸ್ತ್ರಗಳನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡು ವೇದದಲ್ಲಿ ಪಾರಂಗತರಾದರು. ಯಾದವಪ್ರಕಾಶರು ಶುದ್ಧಾದ್ವೈತಿಗಳಾಗಿದ್ದುದರಿಂದ ಉಪನಿಷತ್ತುಗಳಿಗೆಲ್ಲಾ ತಮ್ಮದೇ ಆದ ಅರ್ಥಗಳನ್ನು ತಿಳಿಸುತ್ತಿದ್ದರು ಮತ್ತು ಭಗವಂತನನು ನಿರಾಕಾರನೆಂದು ವರ್ಣಿಸುತ್ತಿದ್ದರು. ಈ ಅಭಿಪ್ರಾಯಗಳನ್ನು ರಾಮಾನುಜರು ಅನೇಕ ವೇಳೆ ಒಪ್ಪುತ್ತಿರಲಿಲ್ಲ.

ಒಂದು ಸಲ ಯಾದವಪ್ರಕಾಶರು "ಕಪ್ಯಾಸಂ ಪುಂಡರೀಕಮೇವಂ ಅಕ್ಷಿಣೀ" ಎಂಬ ಛಾಂದೋಗ್ಯ ಉಪನಿಷತ್ತಿನ ವಾಕ್ಯವನ್ನು ವಿವರಿಸುತ್ತಿದ್ದರು. ಆಗ ಅವರು ಭಗವಂತನ ಕಣ್ಣುಗಳು ಕಪಿಯ ಪೃಷ್ಠ ಭಾಗದಂತೆ ಇವೆ ಎಂದು ಅರ್ಥವನ್ನು ವಿವರಿಸಿದರು. ಈ ಹೊಲಸು ಅರ್ಥವನ್ನು ಕೇಳಿ ರಾಮಾನುಜರಿಗೆ ಬಹಳ ದುಃಖವುಂಟಾಗಿ ಅವರ ಕಣ್ಣುಗಳಲ್ಲಿ ನೀರು ಸುರಿಯಿತು. ಅದನ್ನು ನೋಡಿ ಗುರುವು ರಾಮಾನುಜರನ್ನು ಅದರ ಅರ್ಥವನ್ನು ವಿವರಿಸುವಂತೆ ಕೇಳಿದರು. ಆಗ ರಾಮಾನುಜರು ಕಪ್ಯಾಸಂ ಎಂದರೆ ನೀರನ್ನು ಕುಡಿದು ಅರಳುವ ಪುಷ್ಪದಂತೆ ಸುಂದರವಾಗಿವೆ ಎಂಬುದೇ ಆ ಸೂತ್ರದ ಅರ್ಥವೆಂದು ವಿವರಿಸಿದರು. ಆದರೆ ಈ ಅಭಿಪ್ರಾಯವನ್ನು ಯಾದವ ಪ್ರಕಾಶರು ಒಪ್ಪಲಿಲ್ಲ.

ಇನ್ನೊಂದು ಸಲ ತೈತ್ತರಿಯೋಪನಿಷತ್ತಿನ "ಸತ್ಯಂ ಜ್ಞಾನಂ ಅನಂತಂ ಬ್ರಹ್ಮ" ಎಂಬುವ ವಾಕ್ಯವನ್ನು ವಿವರಿಸುವಾಗ ಯಾದವಪ್ರಕಾಶರು ಜ್ಞಾನದಲ್ಲಿ ತಮ್ಮನ್ನು ಎದುರಿಸುತ್ತಿದ್ದ ರಾಮಾನುಜರನ್ನು ಹೇಗಾದರೂ ಸಾಯಿಸುವ ಯೋಚನೆ ಮಾಡಿದರು. ರಾಮಾನುಜರು ಅದ್ವೈತಕ್ಕೆ ವಿರುದ್ಧರಾದವರೆಂದು ತಮ್ಮ ಶಿಷ್ಯರಿಗೆಲ್ಲಾ ತಿಳಿಸಿದರು ಮತ್ತು ಶಿಷ್ಯರೊಂದಿಗೆ ಗಂಗಾಯಾತ್ರೆ ಹೋಗುವುದಾಗಿ ನಿಶ್ಚಯಿಸಿ ಅಲ್ಲಿ ಗಂಗೆಯಲ್ಲಿ ರಾಮಾನುಜರನ್ನು ಮುಳುಗಿಸಬೇಕೆಂದು ಸಂಚು ಮಾಡಿದರು. ★

೨

# ವಾರಣಾಸಿಯ ಯಾತ್ರೆ ಮತ್ತು ಅಲ್ಲಿ ದೈವಿಕ ಬಿಲ್ಲುಗಾರ ದಂಪತಿಗಳ ದರ್ಶನ

ಯಾದವಪ್ರಕಾಶರ ಕುಟಿಲ ಸಂಚನ್ನು ಅರಿಯದೆ ರಾಮಾನುಜರೂ ಅವರ ಚಿಕ್ಕಮ್ಮನ ಮಗ ಗೋವಿಂದ ಭಟ್ಟರೂ ವಾರಣಾಸಿಗೆ ಅವರೊಂದಿಗೆ ಹೊರಟರು. ಆದರೆ ಕ್ಷಿಪ್ರದಲ್ಲಿಯೇ ಗೋವಿಂದಭಟ್ಟರಿಗೆ ಗುರುವಿನ ಈ ಒಳಸಂಚು ತಿಳಿಯಿತು. ಅವರು ರಾಮಾನುಜರು ಒಬ್ಬರೇ ತಮಗೆ ಸಿಕ್ಕಿದಾಗ ಅವರನ್ನು ಕೂಡಲೇ ಅಲ್ಲಿಂದ ಪಲಾಯನ ಮಾಡುವಂತೆ ಎಚ್ಚರಿಸಿದರು. ಅಂತೆಯೇ ತಕ್ಷಣ ರಾಮಾನುಜರು ತಮ್ಮ ಗುರುವಿನ ಮತ್ತು ಅವರ ಶಿಷ್ಯರ ಸಂಗವನ್ನು ತ್ಯಜಿಸಿ ಕಾಡಿನಲ್ಲಿ ಬೇರೆ ದಾರಿಯಲ್ಲಿ ತಾವೊಬ್ಬರೇ ಹೊರಟರು. ರಾತ್ರಿಯಾದ ಮೇಲೆ ವಿಂಧ್ಯದ ಅಡವಿಯಿಂದ ಹೊರಬರಲು ದಾರಿಗಾಣದೆ ಅವರು ಪರಿತಪಿಸುತ್ತಿದ್ದರು. ಕತ್ತಲೆಯಾಗುತ್ತಾ ಬಂದಂತೆ ಕಾಡುಮೃಗಗಳ ಭಯವು ಅವರನ್ನು ಆವರಿಸಿತು ಆದರೆ ಆ ಸಮಯಕ್ಕೆ ಸರಿಯಾಗಿ ದೂರದಲ್ಲಿ ಒಬ್ಬ ಬೇಡನು ಅವನ ಪತ್ನಿಯೊಂದಿಗೆ ಬರುತ್ತಿರುವುದನ್ನು ನೋಡಿದರು. ಅವರನ್ನು ನೋಡಿ ರಾಮಾನುಜರಿಗೆ ಬಹಳ ಸಂತೋಷವಾಯಿತು. ಆ ಬೇಡ ದಂಪತಿಗಳು ರಾಮಾನುಜರೊಂದಿಗೆ ಬಹಳ ಪ್ರೀತಿಯಿಂದ ಮಾತನಾಡಿ ಅವರನ್ನು ಕಾಡಿನಿಂದ ಹೊರದಾಟಿಸಿ ತಮ್ಮ ಜೊತೆಯಲ್ಲಿ ಕಾಂಚಿಪುರಕ್ಕೆ ಕರೆದುಕೊಂಡು ಹೋಗುವುದಾಗಿ ಹೇಳಿದರು. ಆಗ ರಾತ್ರಿಯಾಗಿ ಬಹಳ ಕತ್ತಲೆಯಾಗಿದ್ದುದರಿಂದ ಆ ಬೇಡದಂಪತಿಗಳೊಂದಿಗೆ ರಾಮಾನುಜರು ಒಂದು ದೊಡ್ಡ ಮರದ ಕೆಳಗೆ ಮಲಗಿದರು. ಕಾಡಿನಲ್ಲಿ ಸುತ್ತಾಡಿ ದಣಿದಿದ್ದ ರಾಮಾನುಜರಿಗೆ ಚೆನ್ನಾಗಿ ನಿದ್ರೆ ಬಂದು ಬಿಟ್ಟಿತು.

ಮಾರನೆಯ ದಿನ ಬೆಳಗ್ಗೆ ಜನ ಸಂಚಾರದ ಗಡಿಬಿಡಿಯಲ್ಲಿ ರಾಮಾನುಜರಿಗೆ ಎಚ್ಚರವಾಯಿತು. ಆದರೆ ಆ ವೇಳೆಗೆ ಬೇಡ ದಂಪತಿಗಳು ಅಲ್ಲಿಂದ ಮಾಯವಾಗಿದ್ದರು. ಆಗ ರಾಮಾನುಜರಿಗೆ ತಾವು ಕಾಂಚೀಪುರದ ಹತ್ತಿರದಲ್ಲಿ ಇರುವುದು ಅರಿವಾಯಿತು. ಬೇಡ ದಂಪತಿಗಳ ರೂಪದಲ್ಲಿ ಬಂದು ತನ್ನನ್ನು ಕಾಪಾಡಿದ ಭಗವಂತನಿಗೆ ವಂದನೆಯನ್ನು ಅರ್ಪಿಸಿ ಕಾಂಚೀಪುರದಲ್ಲಿದ್ದ ತಮ್ಮ ಮನೆಗೆ ಹೋಗಿ ತಮ್ಮ ತಾಯಿಯನ್ನು ವಂದಿಸಿದರು. ತಾಯಿಗೆ ಮಾತ್ರ ತಮ್ಮ ಗುರುವಿನ ಕುಟಿಲತೆಯನ್ನು ತಿಳಿಸಿ ಶ್ರೀಮನ್ನಾರಾಯಣನೇ ತಮ್ಮನ್ನು ಕಾಡಿನಿಂದ ಪಾರುಮಾಡಿ ಕಾಂಚೀಪುರಕ್ಕೆ ತಲುಪಿಸಿದುದನ್ನು ಅರುಹಿದರು.

ಇತ್ತ ಯಾದವಪ್ರಕಾಶರು ವಿಂಧ್ಯ ಅಡವಿಯಲ್ಲಿ ಸುತ್ತಾಡಿ ಒಂದು
ತಿಂಗಳಾದ ಮೇಲೆ ಕಾಂಚೀಪುರವನ್ನು ತಲುಪಿದರು, ಅಷ್ಟರೊಳಗೇ ತಮ
ಗಿಂತ ಮುಂಚೆಯೇ ರಾಮಾನುಜರು ಕಾಂಚೀಪುರವನ್ನು ತಲುಪಿ ವರದರಾಜನ
ಕೈಂಕರ್ಯವನ್ನು ಮಾಡುತ್ತಿರುವುದನ್ನು ನೋಡಿ ಆಶ್ಚರ್ಯಪಟ್ಟರು. ತಮ್ಮ
ಕುಟಿಲತಂತ್ರಕ್ಕೆ ಪಶ್ಚಾತ್ತಾಪಪಟ್ಟು ರಾಮಾನುಜರ ಕ್ಷಮಾಪಣೆಯನ್ನು
ಯಾಚಿಸಿದರು. ಗುರುಶಿಷ್ಯರಿಬ್ಬರೂ ಮೊದಲಿನಂತೆ ಪ್ರೀತಿಯಿಂದ ಇದ್ದರು.
ಕಾಲಕ್ರಮದಲ್ಲಿ "ಸರ್ವಂಖಲ್ವಿದಂಬ್ರಹ್ಮ" ಎಂಬ ವೇದಾಂತ ವಾಕ್ಯಕ್ಕೆ ಯಾದವ
ಪ್ರಕಾಶರ 'ಸಮಸ್ತವೂ ಬ್ರಹ್ಮವೇ' ಎಂಬ ಅದ್ವೈತ ಪರವಾದ ಅರ್ಥ
ವಿವರಣೆಯು ರಾಮಾನುಜರಿಗೆ ಸರಿ ತೋರದೆ ಅವರು ಅದಕ್ಕೆ ವಿಶಿಷ್ಟಾ
ದ್ವೈತ ಪರವಾದ ಎಲ್ಲವೂ ಬ್ರಹ್ಮಾತ್ಮಕವಾದುದು ಎಂಬ ಅರ್ಥವನ್ನು
ವಿವರಿಸಿದರು. ಇದರಿಂದ ಯಾದವಪ್ರಕಾಶರಿಗೆ ಕೋಪವುಂಟಾಗಿ ಅವರು
ರಾಮಾನುಜರನ್ನು ತಮ್ಮ ಶಿಷ್ಯವರ್ಗವನ್ನು ಬಿಟ್ಟು ಹೋಗುವಂತೆ ನಿರ್ಬಂಧಿ
ಸಿದರು. ರಾಮಾನುಜರು ಕೂಡಲೇ ಅಲ್ಲಿಂದ ಹೊರಟು ವರದರಾಜ
ಸ್ವಾಮಿಯ ಸನ್ನಿಧಿಯಲ್ಲಿ ಕೈಂಕರ್ಯ ಪರರಾಗಿದ್ದ ತಿರುಕ್ಕಚ್ಚಿನಂಬಿಗಳನ್ನು
(ಕಾಂಚೀಪೂರ್ಣರನ್ನು) ತಮ್ಮ ಗುರುವಾಗಿ ಹೊಂದಿ ಅವರ ನಿಯಮನ್ನದ
ಪ್ರಕಾರ ವರದರಾಜಸ್ವಾಮಿಯ ಕೈಂಕರ್ಯದಲ್ಲಿ ನಿರತರಾದರು.★

## ೩

# ವಿಶಿಷ್ಟಾದ್ವೈತವನ್ನು ಪ್ರಚಾರ ಮಾಡುವ ನಿರ್ಧಾರ ಕೈಗೊಂಡದ್ದು

ಶ್ರೀವೈಷ್ಣವ ಆಚಾರ್ಯ ಪರಂಪರೆಯಲ್ಲಿ ಮೊದಲನೆಯವರಾದ ನಾಥಮುನಿಗಳ ಪುತ್ರರಾದ ಈಶ್ವರ ಮುನಿಗಳ ಪುತ್ರರೇ ಯಾಮುನಾಚಾರ್ಯರು. ಇವರು ತಮ್ಮ ಚಿಕ್ಕವಯಸ್ಸಿನಿಂದಲೇ ವೇದಾಧ್ಯಯನಾದಿ ಪಾಠಗಳನ್ನು ಚೆನ್ನಾಗಿ ಕಲಿತು, ಎಲ್ಲಾ ತತ್ತ್ವಶಾಸ್ತ್ರಗಳನ್ನೂ ಅರಿತು ಬಹಳ ಪ್ರತಿಭಾವಂತರಾಗಿದ್ದರು. ವ್ಯಾಕರಣ, ತರ್ಕ, ವೇದಾಂತ ಶಾಸ್ತ್ರಗಳನ್ನು ಓದಿ ಪಂಡಿತರಾಗಿದ್ದರು. ಒಂದು ಸಲ ಮಹಾಭಾಷ್ಯ ಭಟ್ಟರೆಂಬ ಇವರ ಗುರುಗಳು 'ವಿದ್ವಜ್ಜನ ಕೋಲಾಹಲ' ನೆಂದು ಬಿರುದು ಪಡೆದ 'ಅಕ್ಕಿಆಳ್ವಾನ್' ಎಂಬ ಪಂಡಿತನಿಂದ ಬಹಳ ತೊಂದರೆಗೀಡಾಗಿರುವುದನ್ನು ಅರಿತು ಯಾಮುನಾಚಾರ್ಯರು ಅವನನ್ನು ವಾದದಲ್ಲಿ ಎದುರಿಸಿ ಜಯವನ್ನು ಗಳಿಸಿದರು. ಇದರಿಂದ ಅತ್ಯಂತ ಸಂತೋಷಗೊಂಡ ಪಾಂಡ್ಯರಾಜನೂ ಅವನ ಪತ್ನಿಯೂ ಯಾಮುನಾಚಾರ್ಯರಿಗೆ ಬಹಳ ಮರ್ಯಾದೆ ಮಾಡಿದರು ಮತ್ತು ಅವರಿಗೆ ಅರ್ಧರಾಜ್ಯವನ್ನು ದಯಪಾಲಿಸಿದರು. ಯಾಮುನಾಚಾರ್ಯರು ರಾಜ್ಯವನ್ನು ಬಹಳ ಚೆನ್ನಾಗಿ ಆಳುತ್ತಾ ಪತ್ನಿಯೊಂದಿಗೆ ಸುಖವಾಗಿದ್ದರು.

ಯಾಮುನಾಚಾರ್ಯರ ಪಿತಾಮಹರಾದ ನಾಥಮುನಿಗಳು ತಮ್ಮ ಶಿಷ್ಯರಾದ ಪುಂಡರೀಕಾಕ್ಷರಿಗೆ (ಉಯ್ಯಕ್ಕೊಂಡಾರ್‌ವರಿಗೆ) ಮುಂದೆ ತಮಗೆ ಮೊಮ್ಮಗನಾಗಿ ಜನಿಸುವ ಯಾಮುನಾಚಾರ್ಯರಿಗೆ ದ್ರಾವಿಡ ವೇದಗಳನ್ನೂ, ಯೋಗಶಾಸ್ತ್ರಗಳನ್ನೂ ಉಪದೇಶಿಸಬೇಕೆಂದೂ, ಅವರನ್ನು ತಮ್ಮ ಆಚಾರ್ಯಪೀಠಕ್ಕೆ ಯೋಗ್ಯರನ್ನಾಗಿಯೂ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತ ಪ್ರವರ್ತಕರನ್ನಾಗಿಯೂ ಮಾಡಬೇಕೆಂದೂ ನಿಯಮನ ಮಾಡಿದ್ದರು. ಆದರೆ ಪುಂಡರೀಕಾಕ್ಷರು ಯಾಮುನಾಚಾರ್ಯರು ಹುಟ್ಟುವುದಕ್ಕೆ ಮೊದಲೇ ಕಾಲವಾದರು. ಅವರು ತಮ್ಮ ಶಿಷ್ಯರಾದ ರಾಮಮಿಶ್ರರನ್ನು (ಮಣಕ್ಕಾಲ್ ನಂಬಿಯವರನ್ನು) ಯಾಮುನಾಚಾರ್ಯರಿಗೆ ಎಲ್ಲವನ್ನೂ ಉಪದೇಶಮಾಡಲು ನಿಯಮಿಸಿದರು. ಆದರೆ ಯಾಮುನಾಚಾರ್ಯರು ರಾಜ್ಯಪದವಿ ಹೊಂದಿ ರಾಜ್ಯವಾಳುವುದರಲ್ಲಿ ನಿರತರಾಗಿದ್ದುದರಿಂದ ಈ ಕಾರ್ಯವನ್ನು ಸಾಧಿಸಲು ರಾಮಮಿಶ್ರರು ಬಹಳ ಶ್ರಮವಹಿಸಿಬೇಕಾಯಿತು. ಬಹಳ ಕಷ್ಟಪಟ್ಟು ಕೊನೆಗೆ ಯಾಮುನಾಚಾರ್ಯರನ್ನು ಅವರ ಅರಮನೆಯಲ್ಲಿ ಕಂಡು ಅವರನ್ನು ತಮ್ಮ ಶಿಷ್ಯನಾಗಿ ಮಾಡಿಕೊಂಡು ಅವರಿಗೆ ವೇದಾಂತ ಶಾಸ್ತ್ರಗಳನ್ನೆಲ್ಲಾ

ಉಪದೇಶಿಸಿದರು. ಇದರ ಫಲವಾಗಿ ಶ್ರೀ ಯಾಮುನಾಚಾರ್ಯರು ವೈರಾಗ್ಯ ಹೊಂದಿ ರಾಜ್ಯವನ್ನು ತೊರೆದು ಸನ್ಯಾಸಾಶ್ರಮವನ್ನು ಸ್ವೀಕರಿಸಿ ಶ್ರೀರಂಗ ದಲ್ಲಿ ಭಗವತ್ಕೈಂಕರ್ಯಪರರಾಗಿ ನೆಲೆಸಿದರು. ಅವರು ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವ ಸ್ತೋತ್ರರತ್ನ ಸಿದ್ಧಿತ್ರಯಂ, ಆಗಮ ಪ್ರಮೇಯ ಮತ್ತು ಗೀತಾರ್ಥ ಸಂಗ್ರಹ ಎಂಬ ಗ್ರಂಥಗಳನ್ನು ರಚಿಸಿದರು.

ಯಾಮುನಾಚಾರ್ಯರು ರಾಮಾನುಜರ ವಿಷಯವನ್ನೆಲ್ಲಾ ಕೇಳಿ ಅವರೇ ತಮ್ಮ ಸಿದ್ಧಾಂತವನು ಸ್ಥಾಪಿಸಲು ಸಮರ್ಥರೆಂದು ಅರಿತು ಅವರನ್ನು ಕಾಣಬೇಕೆಂದು ಕಾಂಚೀಪುರಕ್ಕೆ ಬಂದರು. ಅಲ್ಲಿ ಅವರನ್ನು ಯಾದವಪ್ರಕಾಶಕರ ಗುಂಪಿನಲ್ಲಿ ಕಂಡರು. ಅವರನ್ನು ಮುಂದೆ ತಮ್ಮ ಗುರುಪೀಠಕ್ಕೆ ಆಚಾರ್ಯರನ್ನಾಗಿ ನಿಯಮಿಸಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಅವರ ಮೂಲಕ ಪ್ರಚಾರ ಪಡಿಸಬೇಕೆಂದು ಭಗವಂತನನ್ನು ಪ್ರಾರ್ಥಿಸಿದರು. ಕಾರ್ಯಗೌರವದಿಂದ ಅವರು ತಕ್ಷಣವೇ ಶ್ರೀರಂಗಕ್ಕೆ ಹೋಗಬೇಕಾಯಿತು. ಇದರಿಂದ ಅವರು ರಾಮಾನುಜರನ್ನು ಸಂಧಿಸಿ ಮಾತನಾಡಲು ಆಗಲಿಲ್ಲ. ಶ್ರೀರಂಗದಲ್ಲಿ ಅವರಿಗೆ ದೇಹಾಲಸ್ಯವುಂಟಾಗಿ ಹಾಸಿಗೆ ಹಿಡಿದು ಮಲಗಿದರು. ಕೂಡಲೇ ಅವರು ಕಾಂಚೀಪುರದಿಂದ ರಾಮಾನುಜರನ್ನು ಕರೆತರುವಂತೆ ತಮ್ಮ ಶಿಷ್ಯರಾದ ಮಹಾಪೂರ್ಣರನ್ನು ಕಳುಹಿಸಿದರು. ಮಹಾಪೂರ್ಣರು ಕಾಂಚೀ ಪುರವನ್ನು ತಲುಪಿ ರಾಮಾನುಜರಿಗೆ ಸಮಾಚಾರವನ್ನು ತಿಳಿಸಿ ಇಬ್ಬರೂ ಆತುರದಿಂದ ಓಡೋಡಿ ಶ್ರೀರಂಗವನ್ನು ಬಂದು ತಲುಪುವಷ್ಟರಲ್ಲಿ ಶ್ರೀ ಯಾಮುನಾಚಾರ್ಯರು ದೇವರ ಪಾದಾರವಿಂದವನ್ನು ಸೇರಿಬಿಟ್ಟಿದ್ದರು. ಇದರಿಂದ ರಾಮಾನುಜರಿಗೆ ಅವರ ಅಂತಿಮ ಚರಮವಿಗ್ರಹದ ದರ್ಶನ ಮಾತ್ರ ಲಭಿಸಿತು.

ರಾಮಾನುಜರು ಅವರ ಚರಮವಿಗ್ರಹವನ್ನು ಪಾದಾದಿಕೇಶ ಪರ್ಯಂತ ನೋಡುತ್ತಿದ್ದಾಗ ಅವರ ಬಲಗೈಯಿನ ಮೂರು ಬೆರಳುಗಳು ಮಡಿಸಿರುವುದು ಕಾಣಿಸಿತು. ಈ ರೀತಿ ಇರಲು ಕಾರಣವೇನೆಂದು ಅಲ್ಲಿಯ ಹಿರಿಯರನ್ನು ಪ್ರಶ್ನಿಸಲು ಯಾಮುನಾಚಾರ್ಯರಿಗೆ ಮೂರು ಅಂತಿಮ ಇಚ್ಛೆಗಳು ಇದ್ದ ವೆಂದು ಅವರು ತಿಳಿಸಿದರು. ಒಂದನೆಯದಾಗಿ ವ್ಯಾಸರ ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ಬರೆಯಬೇಕೆಂಬುದೂ, ಎರಡನೆಯದಾಗಿ ಪರಾಶರಮುನಿಯ ವರ ತತ್ತ್ವಗಳನ್ನು ಉಪದೇಶಿಸಬೇಕು, ಅವರ ಹೆಸರನ್ನು ಒಬ್ಬರಿಗೆ ನಾಮಕರಣ ಮಾಡಬೇಕೆಂಬುದೂ ಮತ್ತು ಮೂರನೆಯದಾಗಿ ದಿವ್ಯಪ್ರಬಂಧವನ್ನು ಎಲ್ಲರಿಗೂ ಉಪದೇಶಿಸಬೇಕೆಂದೂ ಅವರ ಅಂತಿಮ ಇಚ್ಛೆಯಾಗಿದ್ದವು, ತಕ್ಷಣವೇ ಶ್ರೀರಾಮಾನುಜರು ಎಲ್ಲರ ಸಮ್ಮುಖದಲ್ಲಿ ತಾವು ಅವರ ಈ ಆಸೆ ಗಳನ್ನು ನೆರವೇರಿಸುವುದಾಗಿ ವಾಗ್ದಾನ ಮಾಡಿದರು. ಕೂಡಲೇ ಎಲ್ಲರೂ ಆಶ್ಚರ್ಯಪಡುವಂತೆ ಯಾಮುನಾಚಾರ್ಯರ ಮಡಿಸಿದ ಬೆರಳುಗಳು ನೆಟ್ಟ

ಗಾದವು. ಇದರಿಂದ ಯಾಮುನಾಚಾರ್ಯರ ಶಿಷ್ಯರು ರಾಮಾನುಜರೇ ತಮಗೆ ಮುಂದಿನ ಸರಿಯಾದ ಗುರುವೆಂದು ಅರಿತರು.★

೬

# ರಾಮಾನುಜರು ಸನ್ಯಾಶ್ರಮ ಸ್ವೀಕರಿಸಿದುದು

ಶ್ರೀ ಯಾಮುನಾಚಾರ್ಯರ ಚರಮವಿಗ್ರಹವನ್ನು ದರ್ಶಿಸಿ ರಾಮಾನುಜರು ಕಾಂಚೀಪುರಕ್ಕೆ ಬಂದರು. ಶ್ರೀ ಯಾಮುನಾಚಾರ್ಯರು ಗತಿಸಿದ ವಿಷಯವನ್ನು ಅವರ ಶಿಷ್ಯರಾದ ಕಾಂಚೀಪೂರ್ಣರಿಗೆ (ತಿರುಕ್ಕಚ್ಚಿನಂಬಿಗಳಿಗೆ) ತಿಳಿಸಿದರು. ಕಾಂಚೀಪೂರ್ಣರ ದೈವಭಕ್ತಿ ಮತ್ತು ನಡೆನುಡಿಗಳನ್ನು ಕಂಡು ಅವರನ್ನು ಗುರುವಾಗಿ ಹೊಂದಲು ಇಚ್ಛಿಸಿ ತಮ್ಮನ್ನು ಶಿಷ್ಯನಾಗಿ ಪರಿಗ್ರಹಿಸಬೇಕೆಂದು ಅವರನ್ನು ಪ್ರಾರ್ಥಿಸಿದರು, ಆದರೆ ಅವರು ತಾವು ಹೀನಜಾತಿಯವರೆಂದು ಅದಕ್ಕೆ ಸಮ್ಮತಿಸಲಿಲ್ಲ, ಅವರ ಭುಕ್ತ ಶೇಷವನ್ನಾದರೂ ಭುಜಿಸಿ ಅವರ ಸಂಬಂಧವನ್ನು ಪಡೆಯಬೇಕೆಂದು ಯೋಚನೆಮಾಡಿ ಅವರನ್ನು ತಮ್ಮ ಮನೆಗೆ ಭೋಜನಕ್ಕೆ ಕರೆದರು. ಆದರೆ ಅವರು ಭೋಜನಕ್ಕೆ ಬಂದಾಗ ರಾಮಾನುಜರು ಮನೆಯಲ್ಲಿ ಇರಲಿಲ್ಲ, ಅವರ ಪತ್ನಿಯು ತನ್ನ ಪತಿಯ ಇಚ್ಛೆಯನ್ನು ತಿಳಿಯದೆ ಹೀನಜಾತಿಯವರಾದ ಅವರ ಎಂಜಲೆಲೆಯನ್ನು ಕೋಲಿನಿಂದ ಹೊರಗೆತಳ್ಳಿ ಸ್ನಾನ ಮಾಡಿದಳು. ಇದರಿಂದ ತಮ್ಮ ಸಂಕಲ್ಪವು ನೆರವೇರದೆ ತಮ್ಮ ಪತ್ನಿಯ ಮೇಲೆ ಕೋಪಗೊಂಡರು.

ರಾಮಾನುಜರು ಶ್ರೀರಂಗದಲ್ಲಿರುವ ಮಹಾಪೂರ್ಣರ ಶಿಷ್ಯರಾಗಬೇಕೆಂಬುದು ಶ್ರೀ ವರದರಾಜಸ್ವಾಮಿಯ ನಿಯಮನವು ಎಂದು ಕಾಂಚೀಪೂರ್ಣರು ರಾಮಾನುಜರಿಗೆ ತಿಳಿಸಿದರು. ಇದರಿಂದ ರಾಮಾನುಜರು ಮಹಾಪೂರ್ಣರ (ಪೆರಿಮನಂಬಿಗಳು) ಹತ್ತಿರ ಪಂಚಸಂಸ್ಕಾರ ಪಡೆದು ಅವರ ಶಿಷ್ಯರಾಗಲು ಶ್ರೀರಂಗಕ್ಕೆ ಹೊರಟರು. ಆ ಸಮಯಕ್ಕೆ ಸರಿಯಾಗಿ ಮಹಾ ಪೂರ್ಣರು ರಾಮಾನುಜರನ್ನು ಗುರುಪೀಠಕ್ಕೆ ನಿಯಮಿಸುವ ಸಲುವಾಗಿ ಕಾಂಚೀಪುರಕ್ಕೆ ಹೊರಟರು, ಇಬ್ಬರೂ ಮಧುರಾಂತಕದಲ್ಲಿ ಸಂಧಿಸಿದರು, ಮಹಾಪೂರ್ಣರು ಶ್ರೀರಾಮ ದೇವರ ಗುಡಿಯ ಪ್ರಾಕಾರದಲ್ಲಿ ರಾಮಾನುಜರಿಗೆ ಪಂಚಸಂಸ್ಕಾರವನ್ನು ಮಾಡಿಸಿ ಅವರನ್ನು ತಮ್ಮ ಶಿಷ್ಯರನ್ನಾಗಿ ಅಂಗೀಕರಿಸಿದರು, ರಾಮಾನುಜರು ಮಹಾಪೂರ್ಣರನ್ನು ಕಾಂಚೀಪುರಕ್ಕೆ ತಮ್ಮ ಮನೆಗೆ ಕರೆದುಕೊಂಡುಹೋದರು, ಮಹಾಪೂರ್ಣರು ರಾಮಾನುಜರ ಮನೆಯ ಒಂದು ಭಾಗದಲ್ಲಿ ತಮ್ಮ ಪತ್ನಿಯೊಡನೆ ಒಂದು ವರ್ಷಕಾಲ ವಾಸಮಾಡಿ ರಾಮಾನುಜರಿಗೆ ದಿವ್ಯ ಪ್ರಬಂಧವನ್ನು ಉಪದೇಶ ಮಾಡಿದರು.

ರಾಮಾನುಜರ ಪತ್ನಿಯಾದ ರಕ್ಷಕಾಂಬಾಳ್ ಸತ್ಕುಲ ಪ್ರಸೂತೆಯಾಗಿದ್ದರೂ ಅವಳಿಗೆ ರಾಮಾನುಜರು ಸದಾಕಾಲವೂ ಗುರುಗಳ ಸೇವೆಯಲ್ಲಿರು

ವುದು ಮನಸ್ಸಿಗೆ ಅಷ್ಟು ಹಿತವಾಗಿರಲಿಲ್ಲ. ಒಮ್ಮೆ ರಕ್ಷಕಾಂಬಾಳ್ ಬಾವಿಯಲ್ಲಿ ನೀರು ಸೇದುತ್ತಿದ್ದಾಗ ಗುರುಪತ್ನಿಯು ಕೊಡದಿಂದ ಸ್ವಲ್ಪ ನೀರು ಇವಳ ಮೇಲೆ ಚಿಮ್ಮಲು ಇಬ್ಬರಿಗೂ ಬಹಳ ಜಗಳ ಉಂಟಾಯಿತು. ಈ ವಿಷಯವು ಮಹಾಪೂರ್ಣರಿಗೆ ತಿಳಿಯಲು ಅವರು ಯಾರಿಗೂ ತಿಳಿಸದೆ ತಮ್ಮ ಪತ್ನಿಯೊಂದಿಗೆ ಶ್ರೀರಂಗಕ್ಕೆ ಹೊರಟು ಹೋದರು. ಆದರೆ ಅವರಿಗೆ ರಾಮಾನುಜರ ಮೇಲಿನ ಪ್ರಿತಿಯಿಂದ ಮನಸ್ಸಿನಲ್ಲಿ ಯಾವ ಅಸಮಾಧಾನವೂ ಉಂಟಾಗಿರಲಿಲ್ಲ. ತಮಗೆ ಪ್ರೀತಿ ಪಾತ್ರರಾದ ಗುರುಗಳ ಪತ್ನಿಯು ವಿಷಯದಲ್ಲಿ ತಮ್ಮ ಹೆಂಡತಿಯು ಒರಟು ನಡುವಳಿಕೆಯು ರಾಮಾನುಜರಿಗೆ ಬಹಳ ವ್ಯಸನವನ್ನು ಉಂಟುಮಾಡಿತು, ಇದೇ ರೀತಿ ಅವಳು ಹಿಂದೆಯೂ ತಮ್ಮ ಗುರುಗಳ ವಿಷಯದಲ್ಲಿ ಅನಾದರಣೆ ತೋರಿಸಿದ್ದುದರಿಂದ ಬೇರೆಯ ಕೆಲಸದ ನಿಮಿತ್ತ ಅವಳನ್ನು ತೌರುಮನೆಗೆ ಕಳುಹಿಸಿ ತಾವು ಸನ್ಯಾಸ ದೀಕ್ಷೆಯನ್ನು ಕೈಗೊಂಡರು. ಒಟ್ಟಿನಲ್ಲಿ ರಾಮಾನುಜರು ತಮ್ಮ ಚಿಕ್ಕವಯಸ್ಸಿನಲ್ಲಿಯೇ ಸನ್ಯಾಸಾಶ್ರಮವನ್ನು ಸ್ವೀಕರಿಸಿ ವಿಶಿಷ್ಟಾದ್ವೈತ ಸಿದ್ಧಾಂತ ಸ್ಥಾಪಕರಾಗಲು ಅವರ ಪತ್ನಿಯು ಕಾರಣವಾದಂತಾಯಿತು.

ಶ್ರೀವರದರಾಜ ಸ್ವಾಮಿಯ ಸಮ್ಮುಖದಲ್ಲಿಯೇ ರಾಮಾನುಜರು ಸನ್ಯಾಸದೀಕ್ಷೆಯನ್ನು ಹೊಂದಿ, ಕಾಷಾಯವನ್ನು ಧರಿಸಿ ತ್ರಿದಂಡಧಾರಿಗಳಾದರು, ಅವರು ಪ್ರಾಪಂಚಿಕ ವ್ಯವಹಾರಗಳನ್ನು ಮರೆತು ವೇದಾಧ್ಯಯನದಲ್ಲೂ, ದಿವ್ಯಪ್ರಭಂದ ಪ್ರವಚನದಲ್ಲೂ, ಹಿಂದೂಧರ್ಮವನ್ನು, ವೈಷ್ಣವ ಸಂಪ್ರದಾಯವನ್ನು ಬೋಧಿಸುವುದರಲ್ಲೂ, ತಮ್ಮ ಕಾಲವನ್ನು ಕಳೆದರು.★

## ೫

# ಶ್ರೀ ರಾಮಾನುಜರ ಶಿಷ್ಯವರ್ಗ

ಶ್ರೀ ರಾಮಾನುಜರು ಸನ್ಯಾಸಾಶ್ರಮ ಸ್ವೀಕರಿಸಿದಮೇಲೆ ಶ್ರೀ ವೈಷ್ಣವ ಮತವನ್ನು ಬೋಧಿಸುತ್ತಿದ್ದರು. ಈ ಕಾರಣ ಸನ್ಯಾಸಿಯ ಪ್ರಭಾವವನ್ನು ಅರಿತು ಅನೇಕರು ಇವರ ಶಿಷ್ಯರಾದರು. ಹಿಂದೆ ಯಾದವ ಪ್ರಕಾಶರೊಂದಿಗೆ ವಾರಣಾಸಿಗೆ ಬಂದಿದ್ದ ಇವರ ಚಿಕ್ಕಪ್ಪನ ಮಗ ಗೋವಿಂದನು ಕಾಳಹಸ್ತಿಗೆ ಹೋಗಿ ಅಲ್ಲಿ ಶೈವಮತವನ್ನು ಅಂಗೀಕರಿಸಿ ಶಿವಭಕ್ತನಾಗಿದ್ದನು. ಅವನನ್ನು ಕರೆತಂದು ಶ್ರೀವೈಷ್ಣವ ಮತಾನುಯಾಯಿಯಾಗಿ ಮಾಡಲು ಶ್ರೀರಾಮಾನುಜರು ತಿರುಪತಿಯಲ್ಲಿದ್ದ ಮಾವ ಪೆರಿಯನಂಬಿಗಳನ್ನು ಕಳುಹಿಸಿದರು. ಪೆರಿಯನಂಬಿಗಳ ವಿದ್ವತ್ತಿನ ಪ್ರಭಾವದಿಂದ ಗೋವಿಂದನು ವೈಷ್ಣವನಾಗಿ ಮಾರ್ಪಟ್ಟು ಶ್ರೀ ರಾಮಾನುಜರ ಶಿಷ್ಯವರ್ಗಕ್ಕೆ ಸೇರಿದನು. ಅವನನ್ನು 'ಎಂಬಾರ್' ಎಂಬ ಹೆಸರಿನಿಂದ ಕರೆದರು.

ಯಾದವಪ್ರಕಾಶರ ತಾಯಿ ದೈವಭಕ್ತಿಯುಳ್ಳವಳಾಗಿದ್ದರು. ಅವರು ಶ್ರೀ ರಾಮಾನುಜರ ಪ್ರಭಾವವನ್ನು ನೋಡಿ ಮತ್ತು ಅವರ ಉಪದೇಶಗಳನ್ನು ಕೇಳಿ ತಮ್ಮ ಮಗನನ್ನು ರಾಮಾನುಜರ ಶಿಷ್ಯರಾಗುವಂತೆ ಪ್ರೇರೇಪಿಸಿದರು. ಇದರ ಫಲವಾಗಿ ಯಾದವಪ್ರಕಾಶರು ಶ್ರೀ ರಾಮಾನುಜರ ಬಳಿ ಉಪದೇಶ ಪಡೆದರು. ಅವರಿಗೆ ಪಂಚ ಸಂಸ್ಕಾರಾದಿಗಳನ್ನು ನಡೆಸಿ ಶ್ರೀ ರಾಮಾನುಜರು ತಮ್ಮ ಶಿಷ್ಯರನ್ನಾಗಿ ಪರಿಗ್ರಹಿಸಿ ಅವರಿಗೆ 'ಗೋವಿಂದಜೀಯರ್' ಎಂಬ ಹೆಸರನ್ನು ನಾಮಕರಣ ಮಾಡಿದರು. ಅವರು ಮುಂದೆ "ಯತಿಧರ್ಮ ಸಮುಚ್ಚಯ" ಎಂಬ ಗ್ರಂಥವನ್ನು ರಚಿಸಿ ತಮ್ಮ ಗುರುಗಳಿಗೆ ಸಮರ್ಪಿಸಿದರು. ಕಾಂಚೀಪುರದ ಬಳಿ 'ಕೂರಂ' ಎಂಬ ಗ್ರಾಮವಿದ್ದಿತು. ಅಲ್ಲಿ 'ಶ್ರೀವತ್ಸಾಂಕ'ರೆಂದೂ 'ಆಳ್ವಾನ್' ಎಂದೂ ಕರೆಯಲ್ಪಟ್ಟ ಐಶ್ವರ್ಯವಂತರಾದ ಶ್ರೀವೈಷ್ಣವರಿದ್ದರು. ಅವರ ಪತ್ನಿಗೆ 'ಆಂಡಾಳ್' ಎಂದು ಹೆಸರು. ಇವರು ಬಹಳ ಧರ್ಮಿಷ್ಠರು, ದಿನವಹಿ ಅನ್ನದಾನ ಮಾಡುತ್ತಿದ್ದರು. ಇವರನ್ನು 'ಕೂರೇಶ' 'ಕೂರನಾಥ' ಎಂದೂ ಕರೆಯುತ್ತಿದ್ದರು. ಇವರು 'ಶ್ರೀರಾಮಾನುಜ'ರ ಪ್ರಭಾವವನ್ನೆಲ್ಲಾ ಕೇಳಿ, ಅವರ ಶಿಷ್ಯರಾಗಬೇಕೆಂದು ಇಚ್ಛಿಸಿ, ತಮ್ಮ ಐಶ್ವರ್ಯವನ್ನೆಲ್ಲಾ ದಾನ ಮಾಡಿ ಪತ್ನಿಯೊಡನೆ ಏಕವಸ್ತ್ರಧಾರಿಯಾಗಿ ಹೊರಟರು. ಆದರೆ ಅವರ ಪತ್ನಿ ತಮ್ಮ ಪತಿಗೆ ನೀರು ಕೊಡಲು ಒಂದು ಚಿನ್ನದ ಬಟ್ಟಲನ್ನು ಮಾತ್ರ ಇಟ್ಟುಕೊಂಡಿದ್ದರು. ನಿರ್ಜನವಾದ ಕಾಡುದಾರಿಯಲ್ಲಿ ಹೋಗುತ್ತಿದ್ದಾಗ ಅವರ ಪತ್ನಿಯು ಭಯಗ್ರಸ್ತಳಾಗಿರುವುದನ್ನು ಕಂಡು ಅವಳ ಬಳಿ

ಇದ್ದ ಬಟ್ಟಲನ್ನು ಕಾಡಿನಲ್ಲಿ ದೂರ ಎಸೆದುಬಿಟ್ಟರು, ಅನಂತರ ಇಬ್ಬರೂ ಯಾವ ಭಯವೂ ಇಲ್ಲದೆ ಶ್ರೀರಾಮಾನುಜರ ಬಳಿ ಹೋಗಿ ಅವರ ಶಿಷ್ಯರಾದರು. ಅವರೊಂದಿಗೆ ಇವರೂ ದಿನವಹಿ ಭಿಕ್ಷಾಟನೆಯಿಂದ ಜೀವಿಸುತ್ತಿದ್ದರು. ಶ್ರೀರಾಮಾನುಜರು ಶ್ರೀರಂಗಕ್ಕೆ ಬಂದ ಮೇಲೆ ಒಮ್ಮೆ ಬಹಳ ಮಳೆಯಿಂದ ಭಿಕ್ಷಾಟನೆಗೆ ಹೋಗಲು ಆಗದೆ ಹಸಿವನ್ನು ಅನುಭವಿಸುವ ಕಷ್ಟವು ಪ್ರಾಪ್ತವಾಯಿತು. ಆಗ ಕೂರೇಶರ ಪತ್ನಿಯು ಪರಮಾತ್ಮನನ್ನು ಪ್ರಾರ್ಥಿಸಲು ಶ್ರೀರಂಗನಾಥನ ದೇವಸ್ಥಾನದಿಂದ ಇವರಿಗೆ ಪ್ರಸಾದವು ಲಭಿಸಿತು. ಆವರೆ ಕೂರೇಶರು ಆ ಪ್ರಸಾದವನ್ನು ತಾವು ಸ್ವಲ್ಪವೇ ಭುಂಜಿಸಿ ಎಲ್ಲವನ್ನೂ ತಮ್ಮ ಪತ್ನಿಗೇ ಕೊಟ್ಟುಬಿಟ್ಟರು.

ಆ ಭಗವತ್ಪ್ರಸಾದವನ್ನು ಪೂರ್ಣವಾಗಿ ತಾವೇ ಭುಂಜಿಸಿದ ಫಲವಾಗಿ ಆಂಡಾಳ್‌ರವರಿಗೆ ಅವಳಿ ಮಕ್ಕಳು ಜನಿದರು, ರಾಮಾನುಜರು ಮೊದಲನೆಯ ಮಗನಿಗೆ ಪರಾಶರರೆಂದೂ ಎರಡನೆಯ ಮಗನಿಗೆ ವ್ಯಾಸರೆಂದೂ ನಾಮಕರಣ ಮಾಡಿದರು. ಇದರಿಂದ ಅವರು ಶ್ರೀ ಆಳವಂದಾರ್ ಅವರ ಅಂತಿಮ ಕಾಲದಲ್ಲಿ ಅವರ ಪಾರ್ಥಿವ ಶರೀರದ ಸಮ್ಮುಖದಲ್ಲಿ ಮಾಡಿದ ಒಂದು ವಾಗ್ದಾನವನ್ನು ನಡೆಸಿದಂತಾಯಿತು. ಆ ಮಕ್ಕಳಿಗೆ ರಾಮಾನುಜರು ತತ್ತ್ವ ಶಾಸ್ತ್ರ ವಿದ್ಯಾಭ್ಯಾಸಗಳನ್ನು ಮಾಡಿಸಿದರು.

ಶ್ರೀ ರಾಮಾನುಜರಿಗೆ ಭೂದೇವಿ ಮತ್ತು ಕಮಲಾದೇವಿ ಎಂಬ ಇಬ್ಬರು ತಂಗಿಯರಿದ್ದರು. ಭೂದೇವಿಗೆ ದಾಶರಥಿ ಎಂಬ ಮಗನೂ ಕಮಲಾದೇವಿಗೆ ವರದವಿಷ್ಣುಆಚಾರ್ಯ ಎಂಬ ಮಗನೂ ಜನಿಸಿದರು. ಇಬ್ಬರೂ ರಾಮಾನುಜರ ಶಿಷ್ಯರಾದರು. ದಾಶರಥಿಗೆ 'ಮುದಲಿಯಾಂಡಾನ್' ಅಥವಾ 'ಆಂಡಾನ್' ಎಂದು ಹೆಸರಾಯಿತು. ವರದವಿಷ್ಣುಆಚಾರ್ಯನಿಗೆ 'ನಡಾದೂರ್ ಆಳ್ವಾನ್' ಎಂದು ಹೆಸರಾಯಿತು. ಇಬ್ಬರೂ ಯಾವಾಗಲೂ ಶ್ರೀರಾಮಾನುಜರನ್ನು ಅನುಸರಿಸುತ್ತಾ ಅವರ ಸೇವೆಯಲ್ಲಿ ನಿರತರಾದರು.★

೬

# ಶ್ರೀ ರಾಮಾನುಜಾಚಾರ್ಯರು ಶ್ರೀರಂಗದ ಮಠಾಧಿಪತಿಗಳಾದುದು

ಆಳವಂದಾರ್‌ರವರ ಮರಣದ ನಂತರ ಪೆರಿಯನಂಬಿಯವರು (ಮಹಾ ಪೂರ್ಣರು) ಶ್ರೀರಂಗಮಠದ ಆಡಳಿತ ನೋಡಿಕೊಂಡು ಎಲ್ಲರಿಗೂ ತತ್ತ್ವೋಪ ದೇಶವನ್ನೂ, ದಿವ್ಯಪ್ರಬಂಧಗಳನ್ನೂ ಬೋಧಿಸುತ್ತಿದ್ದರು. ಅವರ ಶಿಷ್ಯ ರೆಲ್ಲರೂ ಆಳವಂದಾರ್ರವರ ಇಚ್ಛೆಯಂತೆ ಶ್ರೀರಾಮಾನುಜರನ್ನು ಶ್ರೀರಂಗಕ್ಕೆ ಕರೆಸಿಕೊಳ್ಳುವಂತೆ ಕೇಳಿಕೊಳ್ಳಲು ಸಂಗೀತ ವಿದ್ವಾಂಸರಾದ 'ತಿರುವರಂಗ ಪೆರು ಮಾಳ್ ಅರೈಯರ್ ಎಂಬುವರನ್ನು ಕಾಂಚೀಪುರದಿಂದ ಶ್ರೀರಾಮಾನುಜ ರನ್ನು ಶ್ರೀರಂಗಕ್ಕೆ ಕರೆತರುವಂತೆ ಕಳುಹಿಸಿದರು. ಅವರು ತಮ್ಮ ಸಂಗೀತ ಪ್ರಭಾವದಿಂದ ಕಾಂಚೀಪುರದ ಶ್ರೀವರದರಾಜಸ್ವಾಮಿಯನ್ನು ತೃಪ್ತಿಪಡಿಸಿ ರಾಮಾ ನುಜರನ್ನು ಶ್ರೀರಂಗಕ್ಕೆ ಕಳುಹಿಸಿಕೊಡಲು ಒಪ್ಪಿಸಿದರು. ಅವರ ಇಚ್ಛೆಯಂತೆ ಅರೈಯರ್‌ರೊಂದಿಗೆ ಶ್ರೀರಾಮಾನುಜರು ಶ್ರೀರಂಗಕ್ಕೆ ದಯಮಾಡಿಸಿದರು. ಅವರೊಂದಿಗೆ ಅವರ ಪ್ರಧಾನ ಶಿಷ್ಯರಾದ ದಾಶರಥಿ (ಮೊದಲಿಯಾಂಡಾನ್) ಮತ್ತು ಕೂರೇಶ (ಆಳ್ವಾನ್) ಇಬ್ಬರೂ ಶ್ರೀರಂಗಕ್ಕೆ ಬಂದರು. ಶ್ರೀರಾಮಾನು ಜರು ಕಾವೇರಿಯಲ್ಲಿ ಸ್ನಾನಾದಿಗಳನ್ನು ಮುಗಿಸಿಕೊಂಡರು. ಅಲ್ಲಿಗೆ ಶ್ರೀರಾಮಾನು ಜರ ಸಾವಿರಾರು ಶಿಷ್ಯರೂ, ಅನೇಕ ವೈದಿಕರೂ, ಪೆರಿಯನಂಬಿಗಳೂ ಎಲ್ಲರೂ ಗುಂಪಾಗಿ ಸೇರಿ ಶ್ರೀರಾಮಾನುಜರನ್ನು ವೇದಘೋಷ ಮಂಗಳವಾದ್ಯಗಳೊಂ ದಿಗೆ ಮರ್ಯಾದೆಯಿಂದ ಎದುರುಗೊಂಡು ಶ್ರೀರಂಗನಾಥಸ್ವಾಮಿಯ ದೇವಸ್ಥಾ ನಕ್ಕೆ ಕರೆದುಕೊಂಡು ಹೋದರು. ಶ್ರೀರಾಮಾನುಜರು ಶ್ರೀರಂಗನಾಥನನ್ನು ದರ್ಶನ ಮಾಡಿ ಭಕ್ತಿಪರವಶರಾಗಿ ಅವನನ್ನು ಸ್ತುತಿಸಿದರು. ಇವರಿಗೆ 'ಉಡೈ ಯವರ್' ಎಂದರೆ ಉಭಯ ವಿಭೂತಿ ಐಶ್ವರ್ಯವನ್ನು ಪಡೆದವರು ಎಂಬ ಬಿರುದು ಅನುಗ್ರಹಿಸಲ್ಪಟ್ಟಿತು.

ಶ್ರೀರಾಮಾನುಜರು ದೇವಸ್ಥಾನದ ಸಮಸ್ತ ವಿಷಯವನ್ನು ಪರಿಶೀಲಿಸಿ ದರು. ದೇವಸ್ಥಾನದ ಶ್ರೀ ಭಂಡಾರವನ್ನು ದೇವರ ನಿತ್ಯ ಕೈಂಕರ್ಯಗಳನ್ನು, ತಿರುವಾರಾಧನ ಕ್ರಮಗಳನ್ನು, ದೇವಸ್ಥಾನದ ಅಧಿಕಾರಿಗಳ ಮತ್ತು ಕೈಂಕರ್ಯ ಪರರ ವಿಚಾರಗಳನ್ನು, ದೇವಸ್ಥಾನದ ಗೋಪುರ, ಹೂದೋಟಗಳು ಇವುಗಳ ಲ್ಲಿರುವ ಕುಂದುಕೊರತೆಗಳನ್ನೆಲ್ಲ ಸರಿಪಡಿಸಿ ಎಲ್ಲವನ್ನೂ ಉತ್ತಮ ಸ್ಥಿತಿಗೆ ತರಲು ಪ್ರಯತ್ನಿಸಿದರು. ದೇವಸ್ಥಾನದ ಸಮಸ್ತ ವಿಚಾರಗಳನ್ನೂ, ಉತ್ಸ ವಾದಿಗಳನ್ನೂ ಸರಿಯಾಗಿ ನೋಡಿಕೊಂಡು ನಡೆಸಲು ಅಧಿಕಾರಿಗಳನ್ನೂ ನಿಯ

ಮಿಸಿದರು. ಇದರಿಂದ ದೇವಸ್ಥಾನದ ಸಮಸ್ತ ಕಾರ್ಯಕಲಾಪಗಳೂ ಉತ್ತಮ ರೀತಿಯಲ್ಲಿ ನಡೆಯುವಂತೆ ಏರ್ಪಾಡಾಯಿತು. ಶ್ರೀ ರಾಮಾನುಜಾಚಾರ್ಯರು ಶ್ರೀ ಯಾಮುನಾಚಾರ್ಯರ ಮಠದಲ್ಲೇ ವಾಸಮಾಡಿಕೊಂಡು ಪಾಠಪ್ರವಚನಗಳನ್ನು ನಡೆಸುತ್ತಾ ಕಾಲಕಳೆಯುತ್ತಿದ್ದರು.

೭

# ಗೋಷ್ಠೀಪೂರ್ಣರ ಬಳಿ ತಿರುಮಂತ್ರೋಪದೇಶವನ್ನು ಪಡೆದದ್ದು

ಶ್ರೀ ರಾಮಾನುಜನರು ಪೆರಿಯನಂಬಿಗಳನ್ನು ಶ್ರೀ ಆಳವಂದಾರ್ ಅವರಿಂದ ಅವರು ಕಲಿತುಕೊಂಡಿರುವ ತತ್ತ್ವಶಾಸ್ತ್ರಗಳನ್ನು ಬೋಧಿಸುವಂತೆ ಕೇಳಿಕೊಳ್ಳಲು ಅವರು ತಿರುಕ್ಕೊಟ್ಟಿಯೂರಿನಲ್ಲಿದ್ದ ಗೋಷ್ಠೀಪೂರ್ಣರ ಬಳಿ ಹೋಗಿ ಅವರಿಂದ ತಿಳಿದುಕೊಳ್ಳುವಂತೆ ಹೇಳಿದರು. ಗೋಷ್ಠೀಪೂರ್ಣರಿಗೆ ತಿರುಕೋಟ್ಟಿಯೂರ್‌ನಂಬಿ ಎಂಬ ಹೆಸರೂ ಇದ್ದಿತು. ಶ್ರೀರಾಮಾನುಜರು ತಿರುಕೋಟ್ಟಿಯೂರಿಗೆ ಹೋಗಿ ಗೋಷ್ಠೀಪೂರ್ಣರನ್ನು ತಮಗೆ ತಿರುಮಂತ್ರವನ್ನು ಉಪದೇಶಿಸುವಂತೆ ಪ್ರಾರ್ಥಿಸಿದರು. ಆದರೆ ಗೋಷ್ಠೀಪೂರ್ಣರು ರಾಮಾನುಜರನ್ನು ಇನ್ನೊಂದುಸಲ ಬರುವಂತೆ ಹೇಳಿದರು, ರಾಮಾನುಜರು ಮತ್ತೆ ಅವರಲ್ಲಿಗೆ ಹೋದಾಗಲೂ ಅವರು ಇನ್ನೂ ಸ್ವಲ್ಪ ದಿವಸ ಬಿಟ್ಟು ಬರುವಂತೆ ಹೇಳಿದರು. ಇದೇ ರೀತಿ ಗೋಷ್ಠೀಪೂರ್ಣರು ೧೭ ಸಲ ರಾಮಾನುಜರನ್ನು ಸುತ್ತಿಸಿದರು. ರಾಮಾನುಜರಿಗೆ ಮಂತ್ರಾರ್ಥವನ್ನು ತಿಳಿಯುವ ಆಸಕ್ತಿಯನ್ನು, ಶ್ರದ್ಧೆಯನ್ನು ಈ ರೀತಿ ಪರೀಕ್ಷಿಸಿ ೧೮ ನೆಯ ಸಲ ಅವರಿಗೆ ಉಪದೇಶ ಮಾಡಿದರು. ಈ ಶರಣಾಗತಿ ಮಂತ್ರವನ್ನು ಅರಿತು ಉಚ್ಚರಿಸಿದವರಿಗೆ ಸದ್ಗತಿ ಲಭಿಸುವುದೆಂದೂ ಆದರೆ ಅದನ್ನು ಜನಸಾಮಾನ್ಯರಿಗೆ ಉಪದೇಶಿಸದೆ ರಹಸ್ಯವಾಗಿ ಇಟ್ಟುಕೊಳ್ಳಬೇಕೆಂದೂ ತಮ್ಮ ಆಜ್ಞೆಯನ್ನು ಉಲ್ಲಂಘಿಸಿ ಇತರರಿಗೆ ಉಪದೇಶಿಸಿದವರು ನರಕಕ್ಕೆ ಹೋಗುವರೆಂದೂ ತಿಳಿಸಿದರು. ಮಂತ್ರೋಪದೇಶವನ್ನು ಪಡೆದು ಸಂತೋಷದಿಂದ ರಾಮಾನುಜರು ಶ್ರೀರಂಗಕ್ಕೆ ಮರಳುವಾಗ ತಿರುಕ್ಕೋಟಿಯೂರಿನಲ್ಲಿ ರಥೋತ್ಸವದ ಸಲುವಾಗಿ ಅನೇಕ ಜನರು ಕಿಕ್ಕಿರಿದು ನೆರೆದಿರುವುದನ್ನು ನೋಡಿದರು. ತಕ್ಷಣ ಅವರೆಲ್ಲರಿಗೂ ಈ ಮಂತ್ರವನ್ನು ಉಪದೇಶಿಸಬೇಕೆಂಬ ಪ್ರೇರಣೆಯಾಗಿ ಅಲ್ಲಿಯೆ ದೇವಸ್ಥಾನದ ಗೋಪುರದ ಮೇಲೆ ಹೋಗಿ ನಿಂತು ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಮಂತ್ರವನ್ನು ಅರ್ಥಸಹಿತ ಉಪದೇಶಿಸಿಬಿಟ್ಟರು. ಇದನ್ನರಿತು ಗೋಷ್ಠೀಪೂರ್ಣರು ರಾಮಾನುಜರನ್ನು ಕರೆಸಿ ತಮ್ಮ ಆಜ್ಞೆಯನ್ನು ಉಲ್ಲಂಘಿಸಿದುದರ ಫಲ ನರಕಪ್ರಾಪ್ತಿ ಎಂದು ತಿಳಿಸಿದರು. ಆದರೆ ಶ್ರೀ ರಾಮಾನುಜರು ಇಷ್ಟು ಜನರಿಗೆ ಶ್ರೇಯಸ್ಸುಂಟಾಗುವ ಪಕ್ಷದಲ್ಲಿ ತಮ್ಮೊಬ್ಬರಿಗೆ ನರಕಪ್ರಾಪ್ತಿಯಾದರೂ ಪರವಾಗಿಲ್ಲ, ಯಾವ ಶಿಕ್ಷೆಯನ್ನೂ ತಾವು ಅನುಭವಿಸಲು ಸಿದ್ಧರಿರುವುದಾಗಿ ಹೇಳಿದರು ಗೋಷ್ಠೀಪೂರ್ಣರು ರಾಮಾನುಜರ ಹೃದಯವೈಶಾಲ್ಯತೆಯನ್ನು

ಕಂಡು ಬೆರಗಾದರು ಮತ್ತು ಅವರನ್ನು ಬಿಗಿದಪ್ಪಿ, ಹರಸಿ ಅವರಿಗೆ 'ಎಂಬೆರು ಮಾನಾರ್' ಎಂಬ ಬಿರುದನ್ನು ದಯಪಾಲಿಸಿದರು.

ಕೆಲವು ದಿನಗಳ ನಂತರ ಗೋಷ್ಠಿಪೂರ್ಣರು ರಾಮಾನುಜರಿಗೆ ಚರಮ ಶ್ಲೋಕವನ್ನೂ, ಅಂದರೆ ಭಗವದ್ಗೀತೆಯ ೧೮ ನೆಯ ಅಧ್ಯಾಯದ 'ಸರ್ವ ಧರ್ಮಾನ್ ಪರಿತ್ಯಜ್ಯ' ಎಂಬ ಶ್ಲೋಕದ ತತ್ವಾರ್ಥವನ್ನು ಉಪದೇಶ ಮಾಡಿದಗು ಮತ್ತು ಶಮದಮಾದಿ ಗುಣಪೂರ್ಣರಿಗೆ ಮಾತ್ರ ಇದನ್ನು ಉಪದೇಶಿಸಬೇಕೆಂದು ತಿಳಿಸಿದರು. ರಾಮಾನುಜರು ತಮ್ಮ ಶಿಷ್ಯರಾದ ಕೂರೇಶರಿಗೂ ದಾಶರಥಿಗೂ ಅವರ ಶ್ರದ್ಧಾಭಕ್ತಿಗಳನ್ನು ಪರೀಕ್ಷಿಸಿದ ನಂತರ ಅದನ್ನು ಅರ್ಥ ಸಹಿತ ಅವರಿಗೆ ಉಪದೇಶ ಮಾಡಿದರು. ★

# ೮

# ದಿವ್ಯಪ್ರಬಂಧ ಮತ್ತು ಶ್ರೀರಾಮಾಯಣ ಇವುಗಳ ಉಪದೇಶ ಪಡೆದದ್ದು

ಕೆಲವು ದಿನಗಳಾದಮೇಲೆ ಗೋಷ್ಠಿಪೂರ್ಣರು ಶ್ರೀ ಆಳವಂದಾರ್ ಅವರ ಶಿಷ್ಯರಾದ 'ತಿರುಮಲೆಯಾಂಡಾನ್' ಎಂಬುವರೊಂದಿಗೆ ಶ್ರೀರಂಗಕ್ಕೆ ಬಂದರು, ಅವರಿಗೆ 'ಮಾಲಾಧಾರ'ರೆಂದೂ ಹೆಸರಿದ್ದಿತು. ಅವರ ಬಳಿ ತಿರುವಾಯ್ಮೊಳಿ ಪ್ರಬಂಧವನ್ನು ವ್ಯಾಸಂಗ ಮಾಡುವಂತೆ ರಾಮಾನುಜರಿಗೆ ತಿಳಿಸಿದರು. ಅದರಂತೆ ಅವರ ಬಳಿ ದಿವ್ಯ ಪ್ರಬಂಧಗಳನ್ನು ವ್ಯಾಸಂಗ ಮಾಡಲು ಪ್ರಾರಂಭಿಸಿದರು. ಆದರೆ ಆಗಾಗ ಹೇಳಿ ಬೇರೆ ಅರ್ಥವನ್ನು ಹೇಳುತ್ತಾ ಅದೇ ಯಾಮುನಾಚಾರ್ಯರು ಉಪದೇಶಿಸುತ್ತಿದ್ದ ಅರ್ಥವೆಂದು ಹೇಳುತ್ತಿದ್ದರು. ಇದರಿಂದ ಮಾಲಾಧಾರರು ಕುಪಿತರಾಗಿ ಆಳವಂದಾರರನ್ನು ಅವರು ಜೀವಿಸಿದ್ದ ಕಾಲದಲ್ಲಿ ನೋಡಿಯೇ ಇಲ್ಲದ ರಾಮಾನುಜರಿಗೆ ಅವರು ಹೇಳುತ್ತಿದ್ದ ಅರ್ಥವು ತಿಳಿಯುವುದು ಹೇಗೆ ಸಾಧ್ಯ ಎಂದು ಪ್ರಶ್ನಿಸಿ ತಮ್ಮ ಉಪದೇಶವನ್ನು ನಿಲ್ಲಿಸಿಬಿಟ್ಟರು ಅದಕ್ಕೆ ರಾಮಾನುಜರು ಆಳವಂದಾರ್‌ರಿಗೆ ತಾವು ಏಕಲವ್ಯನಂತೆ ಶಿಷ್ಯರು ಎಂದು ತಿಳಿಸಿದರು. ಇವೆಲ್ಲವನ್ನು ಅರಿತು ಗೋಷ್ಠಿಪೂರ್ಣರು ಮಾಲಾಧಾರರಿಗೆ ಶ್ರೀರಾಮಾನುಜರು ಅವತಾರ ಪುರುಷರೆಂದೂ ತಾವುಗಳೆಲ್ಲರೂ ನೆಪಮಾತ್ರಕ್ಕೆ ಅವರಿಗೆ ಗುರುಗಳೆಂದೂ ತಿಳಿಸಿದರು. ಅದನ್ನರಿತು ಮಾಲಾಧಾರರು ರಾಮಾನುಜರಿಗೆ ದ್ರಾವಿಡ ಪ್ರಬಂಧಗಳನ್ನು ವ್ಯಾಖ್ಯಾನಸಹಿತ ವ್ಯಾಸಂಗ ಮಾಡಿಸಿ ಮುಗಿಸಿದರು.

ರಾಮಾನುಜರನ್ನು ಅವರ ಮಾವ ಶ್ರೀ ಶೈಲಪೂರ್ಣರ ಬಳಿ ಶ್ರೀ ರಾಮಾಯಣವನ್ನು ವ್ಯಾಸಂಗ ಮಾಡುವಂತೆ ಮಹಾಪೂರ್ಣರು ತಿಳಿಸಿದರು. ಅದರಂತೆ ಅವರು ಶ್ರೀ ರಾಮಾಯಣದ ರಹಸ್ಯಾರ್ಥಗಳನ್ನೆಲ್ಲಾ ಶ್ರೀ ಶೈಲಪೂರ್ಣರ ಬಳಿ (ತಿರುಮಲೆ ನಂಬಿಯವರ ಬಳಿ) ಚೆನ್ನಾಗಿ ವ್ಯಾಸಂಗ ಮಾಡಿ ತಿಳಿದುಕೊಂಡು ಶರಣಾಗತಿಯೇ ಮೋಕ್ಷಕ್ಕೆ ಸುಲಭವಾದ ಉಪಾಯವೆಂಬುದನ್ನು ಅರಿತರು. ರಾಮಾನುಜರು ವರರಂಗ ನಾಯಕರಿಂದ (ತಿರುವರಂಗ ಪೆರುಮಾಳ್ ಅರೈಯರ್) ಚರಮಪರ್ವ ನಿಷ್ಠೆಯನ್ನು ಅಂದರೆ ಮಂತ್ರೋಪದೇಶ ಮಾಡಿ ಮೋಕ್ಷಕ್ಕೆ ದಾರಿ ತೋರಿಸುವ ಆಚಾರ್ಯನೇ ಪ್ರತ್ಯಕ್ಷ ಪರಮಾತ್ಮನು, ಪರದೈವವು ಎಂಬುದನ್ನು ಅರಿತರು.

ಶ್ರೀ ಆಳವಂದಾರರು ತಮ್ಮ ಮುಖ್ಯ ಶಿಷ್ಯರುಗಳಾದ ಕಾಂಚೀಪೂರ್ಣರು, ಮಹಾಪೂರ್ಣರು, ಶ್ರೀಶೈಲಪೂರ್ಣರು, ಮಾಲಾಧಾರರು, ವರರಂಗನಾಯಕರು

ಮತ್ತು ಗೋಷ್ಠಿಪೂರ್ಣರು ಇವರೆಲ್ಲರಿಗೂ ರಾಮಾನುಜರಿಗೆ ಮಂತ್ರಾರ್ಥಗಳನ್ನೂ, ದ್ರಾವಿಡಪ್ರಬಂಧಗಳನ್ನೂ, ಶ್ರೀ ರಾಮಾಯಣದ ತತ್ವಾರ್ಥಗಳನ್ನೂ, ಚರಮ ಪರ್ವ ನಿಷ್ಠೆಯನ್ನೂ ಉಪದೇಶಿಸುವಂತೆ ನಿಯಮಿಸಿದರು. ಅದರಂತೆ ಅವರ ಈ ಪ್ರಧಾನ ಶಿಷ್ಯರುಗಳು ರಾಮಾನುಜರಿಗೆ ಅವೆಲ್ಲವನ್ನು ಉಪದೇಶಿಸಿದರು. ಅನಂತರ ರಾಮಾನುಜರು ಗದ್ಯತ್ರಯ, ಗೀತಾಭಾಷ್ಯ ಮುತ್ತು ನಿತ್ಯಗ್ರಂಥಗಳನ್ನೂ ರಚಿಸಿ ತಮ್ಮ ಶಿಷ್ಯರಿಗೆ ಎಲ್ಲವನ್ನು ಉಪದೇಶಿಸುತ್ತಿದ್ದರು.

ಆಳವಂದಾರ್‌ರಂತೆಯೇ ರಾಮಾನುಜರು ಪ್ರಕಾಶ ಹೊಂದಿ ಸಾವಿರಾರು ಶಿಷ್ಯರುಗಳನ್ನು ಆಕರ್ಷಿಸಿದರು. ಅವರು ಶ್ರೀರಂಗನಾಥನೊಂದಿಗೆ ಸಂಭಾಷಣೆ ನಡೆಸುವ ಪ್ರಭಾವ ಹೊಂದಿ ಅದನ್ನು ತಮ್ಮ ಗದ್ಯತ್ರಯದಲ್ಲಿ ವಿವರಿಸಿ ತಿಳಿಸಿದ್ದಾರೆ. ಅವರಿಗೆ ವಿಶಿಷ್ಟಾದ್ವೈತ ಪರಿಣತರಾದ 74 ಪ್ರಧಾನ ಶಿಷ್ಯರಿದ್ದರು.

ಸನ್ಯಾಸಿಗಳು ತಾವೇ ಅಡಿಗೆ ಮಾಡಿಕೊಳ್ಳುವುದು ನಿಷಿದ್ಧವಾದುದರಿಂದ ಸನ್ಯಾಸಾಶ್ರಮ ಕೈಗೊಂಡಮೇಲೆ ರಾಮಾನುಜರು ಭಿಕ್ಷಾಟನೆ ಮಾಡಿ ಊಟ ಮಾಡುತ್ತಿದ್ದರು. ಶ್ರೀರಂಗದ ದೇವಸ್ಥಾನದ ಆಡಳಿತವನ್ನು ಅವರೇ ಮುತುವರ್ಜಿಯಿಂದ ನೋಡಿಕೊಳ್ಳುತ್ತಿದ್ದುದರಿಂದ ಅಲ್ಲಿನ ಧರ್ಮಾಧಿಕಾರಿಗಳಿಗೆ ಲಂಚ ತೆಗೆದುಕೊಳ್ಳಲು ಅವಕಾಶವೇ ಸಿಕ್ಕುತ್ತಿರಲಿಲ್ಲವಾದ್ದರಿಂದ ಅವರು ರಾಮಾನುಜರನ್ನು ಹೇಗಾದರೂ ಸಾಯಿಸಬೇಕೆಂದು ಯೋಚಿಸುತ್ತಿದ್ದರು. ಒಂದು ದಿನ ದೇವಸ್ಥಾನದ ಮುಖ್ಯ ಪೂಜಾರಿಯು ರಾಮಾನುಜರು ಭಿಕ್ಷಾಟನೆಗೆ ಬಂದಾಗ ಅವರಿಗೆ ವಿಷಬೆರೆತ ಅನ್ನವನ್ನು ಕೊಡುವಂತೆ ತಮ್ಮ ಪತ್ನಿಗೆ ಆಜ್ಞೆ ಮಾಡಿದರು. ಆದರೆ ಭಿಕ್ಷಾನ್ನ ನೀಡುವಾಗ ಅವಳ ಕೈಗಳು ನಡುಗುತ್ತಿದ್ದುದನ್ನು ಕಂಡು ರಾಮಾನುಜರು ಅವಳನ್ನು ಅದರ ಕಾರಣವನ್ನು ವಿಚಾರಿಸಿದರು. ತೇಜೋಮೂರ್ತಿಯಾದ ರಾಮಾನುಜರಿಗೆ ಸುಳ್ಳು ಹೇಳಲು ಅವರಿಂದ ಆಗದೆ ತಾನು ಕೊಟ್ಟಿರುವುದು ವಿಷಪೂರಿತವಾದ ಅನ್ನವೆಂದೂ ಅದನ್ನು ಭುಂಜಿಸಕೂಡದೆಂದೂ ಅವಳು ಹೇಳಿಬಿಟ್ಟಳು. ಇದರಿಂದ ಮನಸ್ಸಿಗೆ ಬಹಳ ಕ್ಲೇಶಹೊಂದಿ ರಾಮಾನುಜರು ನಡೆದುದೆಲ್ಲವನ್ನೂ ತಿರುಕೊಟ್ಟಿಯೂರ್‌ನಂಬಿಯವರಿಗೆ ತಿಳಿಸಲು ಅವರು ಕಡಾಂಬಿ ಆಚ್ಚಾನ್ ಎಂಬುವವರನ್ನು ರಾಮಾನುಜರಿಗೆ ಅಡಿಗೆ ಮಾಡಲು ನಿಯಮಿಸಿದರು. ಇದರಿಂದ ರಾಮಾನುಜರು ಭಿಕ್ಷಾಟನೆ ಮಾಡಿ ಊಟ ಮಾಡುವುದು ನಿಂತುಹೋಯಿತು. ★

೯

# ಹಲವಾರು ಪಂಡಿತರು ರಾಮಾನುಜರ ಶಿಷ್ಯರಾದುದು

ದಾಶರಥಿ:– ಒಳ್ಳೆಯ ಪಂಡಿತನಾದ ಈತ ರಾಮಾನುಜರ ಅಕ್ಕನ ಮಗ. ಆತನಿಗೆ ತಾನು ವಿದ್ವಾಂಸನೆಂಬ ಅಹಂಕಾರವಿದ್ದಿತು. ರಾಮಾನುಜರ ಉಪದೇಶಗಳನ್ನು ಸರಿಯಾಗಿ ಕೇಳಿಸಿಕೊಳ್ಳದೆ ತಾನೇ ಆಗಾಗ ಉಪದೇಶ ಮಾಡುತ್ತಿದ್ದನು. ಇದನ್ನರಿತ ರಾಮಾನುಜರು ಅವನ ಅಹಂಕಾರವನ್ನು ಮುರಿಯಲು ಅವನನ್ನು ಮಹಾಪೂರ್ಣರ ಮಗಳಾದ ಅತ್ತುಳಾಯ್ ಮನೆಯಲ್ಲಿ ಅಡುಗೆ ಮಾಡಲು ಕಳುಹಿಸಿದರು. ದಾಶರಥಿಯು ಅಡುಗೆಯವನಾಗಿದ್ದರೂ ಕಾಲಕ್ರಮೇಣ ಅಲ್ಲಿಗೆ ಬರುವ ವಿದ್ವಾಂಸರಿಗೆ ಉಪದೇಶ ಮಾಡಿ ಅವರಿಂದ ಬಿರುದು ಪಡೆದನು. ಕೊನೆಗೆ ತನ್ನ ಅಹಂಕಾರವನ್ನೆಲ್ಲಾ ತ್ಯಜಿಸಿ ರಾಮಾನುಜರ ಬಳಿ ಬಂದು ಅವರ ಕೈಂಕರ್ಯದಲ್ಲಿ ನಿರತನಾದನು. ರಾಮಾನುಜರು ಅವನನ್ನು ತಮ್ಮ ಅಂತರಂಗ ಶಿಷ್ಯರಾಗಿ ಸ್ವೀಕರಿಸಿದರು.

ಯಜ್ಞಮೂರ್ತಿ:– ವೇದ, ಸ್ಮೃತಿ ಎಲ್ಲದರಲ್ಲೂ ವಿದ್ವತ್ತು ಹೊಂದಿದ್ದ ಅದ್ವೈತ ಪಂಡಿತರಾದ ಇವರು ರಾಮಾನುಜರೊಂದಿಗೆ ವಾದ ಮಾಡಿ ಅವರನ್ನು ಸೋಲಿಸಬೇಕೆಂಬ ಉದ್ದೇಶದಿಂದ ಶ್ರೀರಂಗಕ್ಕೆ ಬಂದರು. ರಾಮಾನುಜರು ವಿಶಿಷ್ಟಾದ್ವೈತವನ್ನು ತ್ಯಜಿಸಿ ಮಾಯಾವಾದಕ್ಕೆ ಶರಣಾಗಬೇಕೆಂಬುದೇ ಅವರ ಉದ್ದೇಶ್ಯವಾಗಿತ್ತು. ಇಬ್ಬರಿಗೂ ಬಹಳ ದಿವಸ ವಾದ ನಡೆದವು. ಆದರೆ ಯಾರೂ ಸೋಲಲಿಲ್ಲ. ಆಗ ರಾಮಾನುಜರಿಗೆ ಆಳವಂದಾರ್ ಮತ್ತು ಯಾದವಪ್ರಕಾಶರ ಗ್ರಂಥಗಳನ್ನು ಓದಿ ತಿಳಿಯುವಂತೆ ಪ್ರೇರಣೆಯಾಯಿತು. ಅವರು ಅವೆಲ್ಲವನ್ನೂ ಓದಿ ಅವುಗಳಲ್ಲಿ ವಿದ್ವತ್ತನ್ನು ಪಡೆದು ಕೊನೆಗೆ ಯಜ್ಞಮೂರ್ತಿಯನ್ನು ವಾದದಲ್ಲಿ ಸೋಲಿಸಿದರು. ಯಜ್ಞಮೂರ್ತಿಯವರು ರಾಮಾನುಜರನ್ನು ಹೊಗಳಿ ಅವರ ಶಿಷ್ಯರಾದರು. ರಾಮಾನುಜರು ಅವರಿಗೆ ದೇವರಾಜಮುನಿ ಎಂಬ ಬಿರುದನ್ನು ಕೊಟ್ಟರು. ಅವರು ರಾಮಾನುಜರ ಸೇವೆ ಮಾಡುತ್ತಾ ವಿಶಿಷ್ಟಾದ್ವೈತದ ಮಹಿಮೆಯನ್ನು ತಿಳಿಸುವ ಜ್ಞಾನಸಾರ ಮತ್ತು ಪ್ರಮೇಯಸಾರಗಳನ್ನು ಬರೆದರು.

ಧನುರ್ದಾಸ:– ಧನುರ್ದಾಸನೆಂಬುವನು ಹೇಮಾಂಬ ಎಂಬ ಒಬ್ಬ ವೈಶ್ಯಸ್ತ್ರೀಯ ಅತ್ಯಂತ ಸುಂದರವಾದ ಕಣ್ಣುಗಳ ಸೌಂದರ್ಯದಲ್ಲಿ ಆಕರ್ಷಿತನಾಗಿ ಸರ್ವದಾ ಅವಳ ಕಣ್ಣುಗಳನ್ನು ನೋಡುತ್ತಾ ಕಾಲಕಳೆಯುತ್ತಿದ್ದನು.

ಶ್ರೀರಂಗದಲ್ಲಿ ಬ್ರಹ್ಮೋತ್ಸವದ ಮೂರನೆಯ ದಿನ ಶ್ರೀ ರಂಗನಾಥಸ್ವಾಮಿಗೆ ಅತ್ಯಂತ ಸಂಭ್ರಮವಾಗಿ ಗರುಡೋತ್ಸವವು ನಡೆಯುತ್ತದೆ. ಒಂದು ಸಲ ಗರುಡೋತ್ಸವದ ಸಂಭ್ರಮದಲ್ಲಿಯೂ ಧನುರ್ದಾಸನು ಹೇಮಾಂಬಳ ಕಣ್ಣುಗಳ ಸೌಂದರ್ಯದಲ್ಲಿಯೇ ತಲ್ಲೀನನಾಗಿ ಹೋಗುತ್ತಿದ್ದುದನ್ನು ನೋಡಿ ರಾಮಾನುಜಾಚಾರ್ಯರು ಅವನನ್ನು ತಮ್ಮ ಬಳಿ ಕರೆಸಿದರು. ಅವನಿಗೆ ಹೇಮಾಂಬಳ ಕಣ್ಣುಗಳಿಗಿಂತ ಸುಂದರವಾದ ಕಣ್ಣುಗಳನ್ನು ತೋರಿಸುವುದಾಗಿ ಹೇಳಿ ಅವನನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಶ್ರೀರಂಗನಾಥಸ್ವಾಮಿಯ ದರ್ಶನ ಮಾಡಿಸಿದರು. ರಂಗನಾಥಸ್ವಾಮಿಯ ಸುಂದರವಾದ ಕಣ್ಣುಗಳನ್ನು ನೋಡಿ ಒಡನೆಯೇ ತನ್ನ ತಪ್ಪಿನ ಅರಿವಾಗಿ ಜ್ಞಾನೋದಯವಾಯಿತು. ಕೂಡಲೇ ಅವನು ರಾಮಾನುಜರಿಗೆ ಶರಣನಾಗಿ ಅವನೂ ಹೇಮಾಂಬ ಇಬ್ಬರೂ ಅವರಿಗೆ ಪ್ರಣಾಮ ಮಾಡಿದರು. ಅವನು ಕೀಳು ಜಾತಿಯವನಾಗಿದ್ದರೂ ಅವನಿಗೆ ಭಗವದ್ಭಕ್ತಿಯು ಉಂಟಾದ ಮೇಲೆ ರಾಮಾನುಜರು ಅವನನ್ನು ತಮ್ಮ ಮುಖ್ಯ ಶಿಷ್ಯನನ್ನಾಗಿ ಸ್ವೀಕರಿಸಿದರು. ಅವರ ಶಿಷ್ಯರಿಗೆ ಇದು ಸರಿತೋರದೆ ಅವರು ತಮ್ಮ ಅಸಮಾಧಾನವನ್ನು ಆಗಾಗ ಸೂಚಿಸುತ್ತಿದ್ದರು. ಆದರೆ ರಾಮಾನುಜರು ಧನುರ್ದಾಸನು ಕೀಳುಜಾತಿಯವನಾದರೂ ಅವನ ಪಕ್ವವಾದ ಜ್ಞಾನವನ್ನು ಕೊಂಡಾಡಿ ತಮ್ಮ ಶಿಷ್ಯರಿಗೆ ಮೇಲುಜಾತಿಯವರಾದ ಅವರಿಗಿಂತ ಧನುರ್ದಾಸನು ಮೇಲಾದವನೆಂಬುದನ್ನು ತೋರಿಸಿಕೊಟ್ಟರು. ಭಾಗವತರಿಗೆ ವಿದ್ಯಾಮದ, ಧನಮದ, ಕುಲಮದ ಮುಂತಾದವು ಎಂದಿಗೂ ಇರಕೂಡದೆಂಬುದನ್ನು ಉಪದೇಶಿಸಿದರು.

ಯಜ್ಞೇಶ ಮತ್ತು ವರದಾಚಾರ್ಯರು : ತಿರುಪತಿಗೆ ಹೋಗುವ ದಾರಿಯಲ್ಲಿ 'ಅಷ್ಟ ಸಹಸ್ರ ಗ್ರಾಮ' ವೆಂಬ ಊರಿನಲ್ಲಿ ರಾಮಾನುಜರಿಗೆ ಯಜ್ಞೇಶ ಮತ್ತು ವರದಾಚಾರ್ಯರೆಂಬ ಇಬ್ಬರು ಶಿಷ್ಯರಿದ್ದರು. ಯಜ್ಞೇಶನೆಂಬುವನು ಬಹಳ ಹಣವಂತನೂ, ಗರ್ವಿಷ್ಠನಾಗಿಯೂ ಇದ್ದನು. ಬಡವನಾದ ವರದಾಚಾರ್ಯನೂ ಅವನ ಪತ್ನಿಯೂ ದೈವಭಕ್ತರಾಗಿದ್ದರು. ಒಂದು ಸಲ ರಾಮಾನುಜರು ತಿರುಪತಿಗೆ ಹೋಗುವಾಗ ಅಷ್ಟಸಹಸ್ರ ಗ್ರಾಮದಲ್ಲಿ ನಿಲ್ಲಬೇಕಾಯಿತು. ತಾವು ಬರುವ ಸಮಾಚಾರವನ್ನು ಯಜ್ಞೇಶನ ಮನೆಗೆ ತಿಳಿಸುವಂತೆ ತಮ್ಮ ಇಬ್ಬರು ಶಿಷ್ಯರನ್ನು ಕಳುಹಿಸಿದರು. ಸಂತೋಷಗೊಂಡ ಯಜ್ಞೇಶನು ರಾಮಾನುಜರ ಆಗಮನಕ್ಕೆ ಬೇಕಾದ ಏರ್ಪಾಟುಗಳನ್ನು ಅತ್ಯಂತ ಆಟಾಟೋಪದಿಂದ ಮಾಡುವುದರಲ್ಲಿ ನಿರತನಾಗಿ ರಾಮಾನುಜರು ಕಳುಹಿಸಿದ ವೈಷ್ಣವ ಶಿಷ್ಯರಿಗೆ ಊಟೋಪಚಾರಾದಿ ಮರ್ಯಾದೆಯನ್ನು ಮಾಡಿ ಆದರಿಸಲಿಲ್ಲ. ಇದನ್ನರಿತ ರಾಮಾನುಜರು ಅವನ ಮನೆಗೆ ಹೋಗದೆ ವರದಾಚಾರ್ಯನ ಮನೆಗೆ ಹೋದರು. ಇದನ್ನರಿತ ಯಜ್ಞೇಶನು ರಾಮಾನುಜರ ಬಳಿ ಬಂದು ತಾನು ಮಾಡಿದ ಅಪಚಾರಕ್ಕಾಗಿ ಅವರಲ್ಲಿ ಕ್ಷಮೆ ಬೇಡಲು ರಾಮಾನುಜರು ಅವನನ್ನು ಕ್ಷಮಿಸಿದರು.

ರಾಮಾನುಜರು ಬಂದಾಗ ವರದಾಚಾರ್ಯನು ಮನೆಯಲ್ಲಿರಲಿಲ್ಲ.

ಆದಾಗ್ಯೂ ಅವನ ಹೆಂಡತಿ ಲಕ್ಷ್ಮೀದೇವಿಯು ರಾಮಾನುಜರನ್ನೂ ಅವರ ಶಿಷ್ಯರನ್ನೂ ಆದರಿಸಿ ಎಲ್ಲರನ್ನೂ ಊಟಕ್ಕೆ ಆಹ್ವಾನಿಸಿದಳು. ಆದರೆ ಕಡುಬಡತನದಲ್ಲಿದ್ದ ಅವರ ಮನೆಯಲ್ಲಿ ಯಾವ ಸಾಮಾನೂ ಇರಲಿಲ್ಲ. ತನ್ನ ಮಾನವನ್ನೇ ಒತ್ತೆಯಿಡುವುದಾಗಿ ಹೇಳಿ ಒಬ್ಬ ಶ್ರೀಮಂತ ವರ್ತಕನ ಬಳಿ ಸಾಮಾನುಗಳನ್ನು ತಂದು ಎಲ್ಲರಿಗೂ ಅಡಿಗೆ ಮಾಡಿ ಬಡಿಸಿ ಆದರಿಸಿದಳು. ಅವಳ ಪತಿ ವರದಾಚಾರ್ಯನು ಮನೆಗೆ ಬಂದು ಇದೆಲ್ಲವನ್ನು ನೋಡಿ ಸಂತೋಷಪಟ್ಟನು, ಅವನ ಪತ್ನಿಯ ತ್ಯಾಗವನ್ನು ಕೇಳಿ ಎಲ್ಲರೂ ಆಶ್ಚರ್ಯಪಟ್ಟರು. ರಾಮಾನುಜರು ಕೊಟ್ಟ ಪ್ರಸಾದವನ್ನು ಶ್ರೀಮಂತ ವರ್ತಕನಿಗೆ ಕೊಡಲು ಅವನ ವಿಷಯ ಲಾಲಸೆಯೆಲ್ಲಾ ಮಾಯವಾಗಿ ಅವನು ರಾಮಾನುಜರ ಪಾದದಲ್ಲಿ ಬಿದ್ದು ಕ್ಷಮಾಪಣೆಯನ್ನು ಬೇಡಿ ಅವರ ಶಿಷ್ಯನಾದನು. ಮತ್ತು ಬಡದಂಪತಿಗಳಿಗೆ ಸಹಾಯ ಮಾಡುವುದಾಗಿ ತಿಳಿಸಿದನು. ಆದರೆ ವರದಾಚಾರ್ಯರೂ ಅವರ ಪತ್ನಿಯೂ ತಮಗೆ ಬೇಕಾದುದು ಭಗವದ್ಭಕ್ತಿಯೇ ಹೊರತು ಐಶ್ವರ್ಯವಲ್ಲವೆಂದು ತಿಳಿಸಿದರು ★

## ೧೦

# ರಾಮಾನುಜರ ತಿರುಪತಿ ಯಾತ್ರೆ

ಅನಂತಾಚಾರ್ಯರು ತಿರುಪತಿಯಲ್ಲಿ ಪುಷ್ಪ ಕೈಂಕರ್ಯ ಕೈಗೊಂಡದ್ದು:-

ರಾಮಾನುಜಾಚಾರ್ಯರ ತಮ್ಮ ಶಿಷ್ಯರೊಂದಿಗೆ ದಿವ್ಯ ಪ್ರಬಂಧದ ಕಾಲಕ್ಷೇಪ ನಡೆಸುತ್ತಿದ್ದಾಗ ಒಂದುಸಲ "ಒಳಿವಿಲ್‌ಕಾಲಮೆಲ್ಲಾಂ" ಎಂಬ ತಿರುವಾಯ್ಮೊಳಿ ಪಾಶುರಕ್ಕೆ ವ್ಯಾಖ್ಯಾನ ಹೇಳುತ್ತಿದ್ದರು. ಆಗ ಅವರು ಶ್ರೀ ವೆಂಕಟಾಚಲಪತಿಗೆ ಪುಷ್ಪ ಕೈಂಕರ್ಯ ಸೇವೆ ಮಾಡಲು ಯಾರಿಗಾದರೂ ಇಚ್ಛೆ ಉಂಟೇ ಎಂದು ಕೇಳಲು 'ಅನಂದಾಳ್ವಾನ್' ಎಂಬುವರು ತಮಗೆ ಆ ಕೈಂಕರ್ಯವನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿದರು. ಅನಂತರ ಆನಂದಾಳ್ವಾರು ತಿರುಪತಿಯ ಬೆಟ್ಟದ ಮೇಲೆ ಹೋಗಿ ಅಲ್ಲಿ ಒಂದು ಸುಂದರವಾದ ಹೂದೋಟವನ್ನು ಬೆಳೆಸಿ ದೇವರಿಗೆ ಪುಷ್ಪಮಾಲೆಯನ್ನು ಕಟ್ಟಿ ಸಮರ್ಪಿಸುತ್ತಿದ್ದರು. ಇದನ್ನು ಅರಿತು ರಾಮಾನುಜರು ಬಹಳ ಸಂತೋಷಪಟ್ಟರು.

ರಾಮಾನುಜರ ತಿರುಪತಿ ಯಾತ್ರೆ:- ರಾಮಾನುಜರು ತಿರುಪತಿ ಕ್ಷೇತ್ರಕ್ಕೆ ಹೋಗಲು ನಿಶ್ಚಯಿಸಿ ದಾರಿಯಲ್ಲಿ ಅಷ್ಟಸಹಸ್ರ ಗ್ರಾಮದಲ್ಲಿ ವರದಾಚಾರ್ಯನ ಮನೆಯಲ್ಲಿ ತಂಗಿದ್ದು ಅಲ್ಲಿಂದ ತಿರುಪತಿ ಕ್ಷೇತ್ರವನ್ನು ತಲುಪಿದರು. ಆದರೆ ಆದಿಶೇಷ ಸ್ವರೂಪಿಯಾದ ಆ ಬೆಟ್ಟವನ್ನು ತಮ್ಮ ಕಾಲುಗಳಿಂದ ತುಳಿಯಲು ಇಷ್ಟವಿಲ್ಲದೆ ಬೆಟ್ಟದ ಕೆಳಗೇ ಇದ್ದು ವೆಂಕಟಾಚಲಪತಿಯ ಸ್ತೋತ್ರ ಮಾಡುತ್ತಿದ್ದರು. ಇದನ್ನರಿತ ಶ್ರೀಶೈಲಪೂರ್ಣರೂ, ಆನಂದಾಳ್ವಾರರೂ ಬೆಟ್ಟದಿಂದ ಕೆಳಗೆ ಬಂದು ರಾಮಾನುಜರನ್ನು ಬೆಟ್ಟದ ಮೇಲೆ ಬರುವಂತೆ ಪ್ರಾರ್ಥಿಸಿದರು. ಅವರ ಒತ್ತಾಯದಿಂದ ಬೆಟ್ಟವನ್ನು ಹತ್ತಿ ಅಲ್ಲಿ ಆನಂದಳ್ವಾರರ ಪುಷ್ಪೋದ್ಯಾನವನ್ನು ನೋಡಿ ಸಂತೋಷಪಟ್ಟರು. ಸ್ವಾಮಿ ಪುಷ್ಕರಣಿಯಲ್ಲಿ ಧ್ಯಾನಮಾಡಿ ಶ್ರೀನಿವಾಸದೇವರ ದರ್ಶನ ಮಾಡಿ ಅಲ್ಲಿ ಮೂರು ದಿನ ಇದ್ದು, ಬೆಟ್ಟದಿಂದ ಕೆಳಗೆ ಬಂದು ಶ್ರೀಶೈಪೂರ್ಣರ ಬಳಿ ಶ್ರೀ ರಾಮಾಯಣ ಕಾಲಕ್ಷೇಪದಲ್ಲಿ ನಿರತರಾಗಿದ್ದರು. ಕಾಲಕ್ಷೇಪ ಸಂಪೂರ್ಣವಾದ ನಂತರ ಗೋವಿಂದರಾಜಭಟ್ಟರನ್ನು ಕಳೆದುಕೊಂಡು ಶ್ರೀರಂಗಕ್ಕೆ ಪ್ರಯಾಣ ಮಾಡಿದರು.

ಗೋವಿಂದಭಟ್ಟರು ರಾಮಾನುಜರ ಬಳಿ ಬಂದು ಸೇರಿದುದು:- ಕಾಳಹಸ್ತಿಯಲ್ಲಿ ಶೈವಸಂಪ್ರದಾಯವನ್ನು ಸ್ವೀಕರಿಸಿದ್ದ ಗೋವಿಂದಭಟ್ಟರಿಗೆ ಶ್ರೀಶೈಲಪೂರ್ಣರು ಉಪದೇಶ ಮಾಡಿ ಶ್ರೀ ವೈಷ್ಣವರನ್ನಾಗಿ ಮಾರ್ಪಡಿಸಿದ ಮೇಲೆ ಅವರು ತಿರುಪತಿಯಲ್ಲಿ ತನ್ನ ಮಾವ ಶ್ರೀಶೈಲಪೂರ್ಣರಿಗೆ ಸೇವೆ ಸಲ್ಲಿಸಿಕೊಂಡಿದ್ದರು. ರಾಮಾನುಜರು ತಿರುಪತಿಗೆ ಹೋದಾಗ ಗೋವಿಂದಭಟ್ಟರನ್ನು ತನ್ನ ಬಳಿಗೆ

ಕಳುಹಿಸಿಕೊಡಬೇಕೆಂದು ಶ್ರೀಶೈಲಪೂರ್ಣರನ್ನು ಪ್ರಾರ್ಥಿಸಲು ಅವರು ಒಪ್ಪಿ ಕಳುಹಿಸಿಕೊಟ್ಟರು. ಆದರೆ ರಾಮಾನುಜರೊಂದಿಗೆ ಕಾಂಚೀಪುರಕ್ಕೆ ಬಂದು ಕೆಲವು ಕಾಲವಾದ ಮೇಲೆ ಗೋವಿಂದಭಟ್ಟರು ಶ್ರೀ ಶೈಲಪೂರ್ಣರನ್ನು ಬಿಟ್ಟಿರಲಾರದೆ ಮತ್ತೆ ಅವರ ಬಳಿಗೆ ಹೋದರು. ಆದರೆ ಶ್ರೀಶೈಲಪೂರ್ಣರು ಅವರನ್ನು ಅಲ್ಲಿ ಇರಿಸಿಕೊಳ್ಳದೆ ಕಾಂಚೀಪುರಕ್ಕೆ ರಾಮಾನುಜರ ಬಳಿಗೆ ವಾಪಸ್ಸು ಕಳುಹಿಸಿದರು. ರಾಮಾನುಜರು ಪ್ರೀತಿಯಿಂದ ಅವರನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿದರು. ಅಂದಿನಿಂದ ಗೋವಿಂದಭಟ್ಟರು ರಾಮಾನುಜರ ಅಂತರಂಗ ಶಿಷ್ಯರಲ್ಲಿ ಒಬ್ಬರಾಗಿ ಅವರ ಸೇವೆ ಮಾಡಿಕೊಂಡಿದ್ದರು. ಕಾಲಕ್ರಮೇಣ ಗೋವಿಂದಭಟ್ಟರು ತಮ್ಮ ತಾಯಿ ಮತ್ತು ಪತ್ನಿಯನ್ನು ಒಪ್ಪಿಸಿ ರಾಮಾನುಜರಿಂದ ಸನ್ಯಾಸಾಶ್ರಮ ಸ್ವೀಕರಿಸಿದರು. ರಾಮಾನುಜರು ಅವರಿಗೆ 'ಎಂಬಾರ್' ಎಂದು ನಾಮಕರಣ ಮಾಡಿದರು.

ರಾಮಾನುಜರ ಕಾಶ್ಮೀರ ಪ್ರವಾಸ ಮತ್ತು ಶ್ರೀಭಾಷ್ಯ ಗ್ರಂಥದ ರಚನೆ:-

ಶ್ರೀ ಆಳವಂದಾರ್‌ರವರಿಗೆ ರಾಮಾನುಜರು ಕೊಟ್ಟ ಮೂರು ವಾಗ್ದಾನಗಳಲ್ಲಿ ವೇದವ್ಯಾಸರ ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆಯಬೇಕೆಂಬುದು ಎರಡನೆಯ ವಾಗ್ದಾನವಾಗಿದ್ದಿತು. ಇದನ್ನು ಪೂರ್ತಿಗೊಳಿಸಬೇಕೆಂಬುದು ಮನಸ್ಸು ಮಾಡಿದರು. ಬೋಧಾಯನರು ವ್ಯಾಸರ ಬ್ರಹ್ಮಸೂತ್ರಕ್ಕೆ ಬರೆದ ಭೋದಾಯನ ವೃತ್ತಿಎಂಬ ವ್ಯಾಖ್ಯಾನವು ಕಾಶ್ಮೀರದ ಸರಸ್ವತಿ ಪೀಠದಲ್ಲಿರುವುದು ರಾಮಾನುಜರಿಗೆ ತಿಳಿಯಿತು. ಅವರು ಆ ಸದ್ಗ್ರಂಥದ ಶೋಧನೆಗಾಗಿ ತಮ್ಮ ಪ್ರಧಾನ ಶಿಷ್ಯರಾದ ಕೂರೇಶರೊಂದಿಗೂ ಮತ್ತು ಇತರ ಕೆಲವು ಶಿಷ್ಯರೊಂದಿಗೂ ಕಾಶ್ಮೀರಕ್ಕೆ ಬಂದರು. ತಮ್ಮ ವಿದ್ವತ್ತಿನಿಂದ ಅಲ್ಲಿನ ಪಂಡಿತರುಗಳನ್ನು, ಮಹಾರಾಜನನ್ನು ಸಂತೋಷಗೊಳಿಸಲು ಅವರು ಆ ಗ್ರಂಥವನ್ನು ಕೆಲವು ದಿನಗಳಿಗೆ ಮಾತ್ರ ಓದಲು ಕೊಟ್ಟರು. ಆದರೆ ಅಲ್ಲಿನ ಕೆಲವು ಪಂಡಿತರು ಅದನ್ನು ವಾಪಸ್ಸು ತೆಗೆದುಕೊಂಡುಬಿಟ್ಟರು. ಇದರಿಂದ ರಾಮಾನುಜರಿಗೆ ಬಹಳ ದುಃಖವುಂಟಾಯಿತು. ಆದರೆ ಕೂರೇಶರು ತಾವು ಅದನ್ನು ಓದಿಮುಗಿಸಿರುವುದಾಗಿಯೂ ಅದು ತಮ್ಮ ಮನಸ್ಸಿನಲ್ಲಿ ಪೂರ್ಣ ಜ್ಞಾಪಕವಿರುವುದಾಗಿಯೂ ತಿಳಿಸಲು ರಾಮಾನುಜರು ಸಂತೋಷದಿಂದ ಶ್ರೀರಂಗಕ್ಕೆ ಹಿಂತಿರುಗಿ ಬಂದರು.

ಶ್ರೀರಂಗಕ್ಕೆ ಬಂದ ಮೇಲೆ ಬ್ರಹ್ಮಸೂತ್ರಕ್ಕೆ ವ್ಯಾಖ್ಯಾನ ಬರೆಯಲು ಪ್ರಾರಂಭಿಸಿದರು. ರಾಮಾನುಜರು ಹೇಳುತ್ತಿದ್ದುದನ್ನು ಆಳ್ವಾನ್‌ರವರು ಬರೆಯುತ್ತಿದ್ದರು. ಆದರೆ ತಮಗೆ ಅದು ಸರಿತೋರದಿದ್ದರೆ ಬರೆಯುವುದನ್ನು ಅಲ್ಲೇ ನಿಲ್ಲಿಸುವುದಾಗಿ ಏರ್ಪಾಡು ಮಾಡಿಕೊಂಡಿದ್ದರು. ಜೀವಾತ್ಮಸ್ವರೂಪವು ಜ್ಞಾತೃತ್ವ ಎಂದು ಹೇಳಿದಾಗ ಆಳ್ವಾರ್‌ರವರು ಬರೆಯುವುದನ್ನು ನಿಲ್ಲಿಸಿ ಅದು ಸರಿಯಲ್ಲ. ಶೇಷತ್ವದಿಂದ ಕೂಡಿದ ಜ್ಞಾತೃತ್ವವೇ ಜೀವಾತ್ಮ ಸ್ವರೂಪವೆಂಬುದನ್ನು ತಿಳಿಸಿದರು. ಅದನ್ನು ಒಪ್ಪಿ ರಾಮಾನುಜರು ಅದನ್ನೇ ಸರಿಯಾಗಿ ಪ್ರತಿಪಾದಿಸಿದ ಮೇಲೆ ಆಳ್ವಾನ್‌ರವರು ಬರೆಯುವುದನ್ನು ಮುಂದುವರೆ

ಸಿದರು. ಬ್ರಹ್ಮಸೂತ್ರಕ್ಕೆ ರಾಮಾನುಜರು ಬರೆದ ಭಾಷ್ಯವು ಸಂಪೂರ್ಣವಾಗಿ ಅದು ಶ್ರೀಭಾಷ್ಯವೆಂಬ ಹೆಸರಿನಲ್ಲಿ ಪ್ರಸಿದ್ಧಿ ಹೊಂದಿತು. ಆಳವಂದಾರ್‌ರವರಿಗೆ ರಾಮಾನುಜರು ಕೊಟ್ಟ ಅತಿಮುಖ್ಯವಾದ ಪ್ರತಿಜ್ಞೆಯನ್ನು ನೆರವೇರಿದರು. ಇದರಿಂದ ರಾಮಾನುಜರಿಗೆ ಭಾಷ್ಯಕಾರರೆಂಬ ಬಿರುದು ಉಂಟಾಯಿತು. ಅವರು ವೇದವ್ಯಾಸರ ಬ್ರಹ್ಮಸೂತ್ರಗಳಿಗೆ ವಿಸ್ತಾರವಾದ ವ್ಯಾಖ್ಯಾನ ಬರೆದು ಶ್ರೀ ಶಂಕರಾಚಾರ್ಯರಂತೆಯೂ, ಮಧ್ವಾಚಾರ್ಯರಂತೆಯೂ ಆಚಾರ್ಯರೆನಿಸಿಕೊಂಡರು. ಶ್ರೀ ಭಾಷ್ಯಗ್ರಂಥ ರಚನೆಯಾದ ಮೇಲೆ ರಾಮಾನುಜರು ಅದನ್ನು ಸಂಗ್ರಹಿಸಿ ವೇದಾಂತದೀಪವೆಂಬ ಗ್ರಂಥವನ್ನೂ, ಅತಿ ಸಂಗ್ರಹವಾದ ವೇದಾಂತಸಾರವೆಂಬ ಗ್ರಂಥವನ್ನೂ ಬರೆದರು. ಉಪನಿಷತುಗಳಲ್ಲಿರುವ ತತ್ವಾರ್ಥಗಳನ್ನೆಲ್ಲಾ ವಿವರಿಸಿ ವೇದಾರ್ಥ ಸಂಗ್ರಹವೆಂಬ ಗ್ರಂಥವನ್ನು ರಚಿಸಿದರು. ✡

೧೧

# ರಾಮಾನುಜರ ದಿವ್ಯ ದೇಶಗಳ ಯಾತ್ರೆ

ಶ್ರೀ ಭಾಷ್ಯಗ್ರಂಥ ರಚನೆಯಾದಮೇಲೆ ರಾಮಾನುಜರು ತಮ್ಮ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರಚಾರಮಾಡಲು ತಮ್ಮ ಷ್ಯರುಗಳೊಂದಿಗೆ ದಿವ್ಯ ದೇಶಗಳ ಯಾತ್ರೆಯನ್ನು ಕೈಗೊಂಡರು. ಶ್ರೀರಂಗನಾಥಸ್ವಾಮಿಯ ಅನುಮತಿಯನ್ನು ಪ್ರಾರ್ಥಿಸಿ ತಮ್ಮ ಪ್ರಧಾನ ಶಿಷ್ಯರೊಂದಿಗೆ ಹೊರಟರು. ಮೊದಲು ಕಂಚಿವರದರಾಜಸ್ವಾಮಿಯ ದರ್ಶನ ಮಾಡಿ ಕುಂಬಕೋಣಕ್ಕೆ (ತಿರುಕ್ಕುಡಂದೈ) ಹೋಗಿ ಅಲ್ಲಿಂದ ತಿರುವಾಲಿ ತಿರುನಗರಿ, ತಿರುಮಾಲಿರಂಶೋಲೈ (ಅಳಹರ್ ಮಲೈ), ತಿರುಪ್ಪಲ್ಲಾಣಿ, ಶ್ರೀವಿಲ್ಲಿಪುತ್ತೂರ್, ಆಳ್ವಾರ್ ತಿರುನಗರಿ, ತಿರುಕ್ಕುರುಂಗುಡಿ ಮುಂತಾದ ಊರುಗಳಿಗೆ ಹೋಗಿ ಅಲ್ಲಿಂದ ತಿರುವನಂತಪುರಕ್ಕೆ ಹೋಗಿ ಪದ್ಮನಾಭಸ್ವಾಮಿಯ ದರ್ಶನ ಮಾಡಿದರು.

ಅಲ್ಲಿಂದ ಉತ್ತರಭಾರತದ ಕಡೆಗೆ ಪ್ರಯಾಣ ಮಾಡಿ ದ್ವಾರಕಾ, ಪುಷ್ಕರ ಮಥುರಾ, ಬೃಂದಾವನ, ಸಾಲಿಗ್ರಾಮ, ಮುಕ್ತಿನಾಥ ಕ್ಷೇತ್ರ, ನಂದವ್ರಜ ನೈಮಿಶಾರಣ್ಯ, ದೇವಪ್ರಯೋಗ, ಬದರಿಕಾಶ್ರಮ, ಶ್ರೀ ವೈಕುಂಠ ಮುಂತಾದ ಸ್ಥಳಗಳಿಗೆಲ್ಲಾ ಹೋದರು. ಅಲ್ಲೆಲ್ಲಾ ದೇವರನ್ನು ದರ್ಶಿಸಿ, ವಿದ್ವಾಂಸರುಗಳೊಡನೆ ವಾದಿಸಿ ಜಯಗಳಿಸಿದರು. ಅಲ್ಲಿಂದ ಕಾಶ್ಮೀರದ ಶಾರದಾಪೀಠಕ್ಕೆ ಬಂದು ಸೇರಿದರು. ಇಲ್ಲಿಂದ ಕಾಶಿ,ಅಯೋಧ್ಯೆ, ಪ್ರಯಾಣದ ಮಾರ್ಗವಾಗಿ ಜಗನ್ನಾಥ (ಪುರಿ) ಕ್ಕೆ ಬಂದು ಅಲ್ಲಿತಮ್ಮ ಮಠವೊಂದನ್ನು ಸ್ಥಾಪಿಸಿದರು. ಅದನ್ನು 'ಎಂಬಾರ್' ಮಠವೆಂದು ಕರೆದರು. ಪುರಿಯಿಂದ ಶ್ರೀಕೂರ್ಮ, ಸಿಂಹಾಚಲ, ವಾರಂಗಲ್, ಅಹೋಬಲ ಮುಂತಾದ ಸ್ಥಳಗಳ ಮಾರ್ಗವಾಗಿ ಪ್ರಯಾಣಮಾಡಿ ತಿರುಪತಿ ಕ್ಷೇತ್ರವನ್ನು ತಲುಪಿದರು.

ಆಗ ತಿರುಪತಿಯಲ್ಲಿ ದೇವರು ತಮಗೇ ಸೇರಿದವರೆಂದು ಶೈವರಿಗೂ, ವೈಷ್ಣವರಿಗೂ ವಾದ-ವಿವಾದಗಳು ನಡೆಯುತ್ತಿದ್ದವು. ಅಲ್ಲಿನ ದೇವರನ್ನು ಶೈವರು ಶಿವನೆಂದೂ, ವೈಷ್ಣವರು ವಿಷ್ಣುವೆಂದೂ ವಾದಿಸುತ್ತಿದ್ದರು. ರಾಮಾನುಜರು ಒಂದು ದಿನ ರಾತ್ರಿ ವಿಷ್ಣುವಿನ ಚಿಹ್ನೆಯಾದ ಶಂಖಚಕ್ರಗಳನ್ನೂ, ಶಿವನ ಚಿಹ್ನೆಯಾದ ತ್ರಿಶೂಲ ಡಮರುಗಗಳನ್ನೂ, ದೇವರ ಮುಂದಿಟ್ಟು ಮಾರನೆಯ ದಿವಸ ಬೆಳಿಗ್ಗೆ ಬಾಗಿಲು ತೆಗೆದು ನೋಡಿದಾಗ ದೇವರು ಶಂಖಚಕ್ರಗಳನ್ನು ಧರಿಸಿದ್ದುದನ್ನು ಕಂಡರು. ಇದರಿಂದ ನಾರಾಯಣನೇ ಏಳು ಬೆಟ್ಟಗಳ ಒಡೆಯನೆಂದು ಸ್ಥಾಪಿಸಿದರು. ಅನಂತರ ವೈಷ್ಣವ ಸಂಪ್ರದಾಯದಂತೆ ದೇವರಿಗೆ ಪೂಜಾದಿ

ಗಳನ್ನು ನಡೆಸುವ ಏರ್ಪಾಡಾಯಿತು. ತಿರುಪತಿಯ ವಿದ್ವಾಂಸರನ್ನು ವಾದದಲ್ಲಿ ಜಯಿಸಿ ಕಂಚಿಗೆ ಹೋಗಿ ವರದರಾಜಸ್ವಾಮಿಯ ದರ್ಶನ ಪಡೆದು ತಮ್ಮ ಸ್ವಸ್ಥಾನವಾದ ಶ್ರೀರಂಗವನ್ನು ತಲುಪಿದರು. ರಾಮಾನುಜರು ಆಸೇತು ಹಿಮಾಚಲ ಯಾತ್ರೆ ಮಾಡಿ ತಾವು ಹೋದ ಕಡೆಗಳಲ್ಲೆಲ್ಲಾ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರಚಾರಪಡಿಸಿದರು. ★

# ೧೨

# ಕ್ರಿಮಿಕಂಠಚೋಳನಿಂದ ಕೂರೇಶರು ತಮ್ಮ ಕಣ್ಣನ್ನು ಕಳೆದುಕೊಂಡದ್ದು

ರಾಮಾನುಜರ ಉಪದೇಶದಿಂದ ಎಲ್ಲ ಕಡೆಯಲ್ಲಿಯೂ ವೈಷ್ಣವ ಮತವು ಪ್ರಾಬಲ್ಯಕ್ಕೆ ಬಂದಿತು ಆದರೆ ಚೋಳದೇಶದ ರಾಜನಾದ ಕ್ರಿಮಿಕಂಠಚೋಳನೆಂಬ ಶಿವಭಕ್ತನು ವೈಷ್ಣವ ಮತದ ಅನುಯಾಯಿಗಳಿಗೆ ಬಹಳ ತೊಂದರೆ ಕೊಡುತ್ತಾ ಅವರನ್ನು ಶಿವಭಕ್ತರಾಗುವಂತೆ ಒತ್ತಾಯಿಸುತ್ತಿದ್ದನು. ಅವನ ಮಂತ್ರಿಗಳು ಮತಸ್ಥಾಪಕರನ್ನೇ ಶಿವಭಕ್ತರಾಗುವಂತೆ ಮಾಡಿದರೆ ಅವರ ಶಿಷ್ಯರು ತಾವಾಗಿಯೇ ಶಿವಭಕ್ತರಾಗುವರೆಂದು ಬೋಧಿಸಲು ಅವನು ರಾಮಾನುಜರನ್ನು ಕರೆತರುವಂತೆ ದೂತರನ್ನು ಕಳುಹಿಸಿದನು. ರಾಜನ ಈ ಆಜ್ಞೆಯು ಮೊದಲು ಕೂರತ್ತಾಳ್ವಾರವರಿಗೆ ತಿಳಿಯಲು ಅವರು ರಾಮಾನುಜರನ್ನು ಈ ಸಂದಿಗ್ಧತೆಯಿಂದ ಪಾರುಮಾಡಲು ರಾಮಾನುಜರ ಕಾಷಾಯವನ್ನು ತಾವು ಧರಿಸಿ ಅವರ ತ್ರಿದಂಡ ಕಮಂಡಲಗಳನ್ನು ತೆಗೆದುಕೊಂಡು ತಾವೇ ರಾಮಾನುಜರಂತೆ ನಟಿಸುತ್ತಾ ಪೆರಿಯನಂಬಿಯವರ ಜೊತೆಯಲ್ಲಿ ರಾಜನ ಬಳಿ ಹೋದರು, ರಾಮಾನುಜರನ್ನು ಕ್ರೂರ ರಾಜನಿಂದ ತಪ್ಪಿಸಿಕೊಳ್ಳಲು ವೇಷ ಮರೆಸಿಕೊಂಡು ಊರು ಬಿಟ್ಟು ಹೊರಟುಹೋಗುವಂತೆ ಕೂರೇಶರು ಪ್ರಾರ್ಥಿಸಿದರು.

ಕೂರೇಶರು ಚೋಳದೇಶಕ್ಕೆಹೋಗಿ ಅಲ್ಲಿನ ಜನಗಳಿಗೆ ವಿಶಿಷ್ಟಾದ್ವೈತವನ್ನು ಬೋಧಿಸುತ್ತಾ ರಾಜನಬಳಿಗೆ ಹೋದರು. ರಾಜನ 'ಶಿವಾತ್ಪರತರಂನಾಸ್ತಿ' ಎಂದರೆ ಶಿವನಿಗಿಂತ ಮೇಲಾದುದಿಲ್ಲವೆಂಬುದಕ್ಕೆ ಸಹಿ ಹಾಕಬೇಕೆಂದೂ, ಇಲ್ಲದಿದ್ದರೆ ಅವರ ಕಣ್ಣುಗಳನ್ನು ಕೀಳಿಸುವುದಾಗಿಯೂ ಹೇಳಿದನು. ಆದರೆ ಕೂರೇಶರು ಅದರೊಂದಿಗೆ "ದ್ರೋಣಮಸ್ತಿ ತತಃಪರಂ" ಎಂದು ಬರೆದು ಸಹಿ ಹಾಕಿದರು. ಶಿವ ಎಂಬುದಕ್ಕೆ ಅಳತೆಯ ಸೇರು ಎಂದೂ, ದ್ರೋಣ ಎಂಬುದಕ್ಕೆ ಕೊಳಗ ಎಂದೂ ಅರ್ಥವಿರುವುದರಿಂದ ಸೇರಿಗಿಂತ ಕೊಳಗವೇ ಮೇಲೆಂದು ಬರೆದಹಾಗಾಯಿತು, ಇದರಿಂದ ಕೋಪಗೊಂಡ ರಾಜನು ಅವರ ಕಣ್ಣುಗಳು ಕೀಳಿಸುವಂತೆ ದೂತರಿಗೆ ಆಜ್ಞೆ ಮಾಡಿದನು. ಆದರೆ ಕೂರೇಶರು ಅದಕ್ಕೆ ಆಸ್ಪದ ಕೊಡದೆ ತಮ್ಮಕಣ್ಣನ್ನು ತಾವೇ ಕಿತ್ತುಕೊಂಡುಬಿಟ್ಟರು. ಪೆರಿಯನಂಬಿಗಳಿಗೆ ಬಹಳ ವಯಸ್ಸಾದುದರಿಂದ ಈ ದುಃಖವನ್ನು ತಾಳಲಾಗದೆ ಅವರು ತಮ್ಮ ಪ್ರಾಣವನ್ನು ತ್ಯಜಿಸಿದರು. ತಮಗೆ ಹಿಂಸೆಕೊಟ್ಟವರೊಂದಿಗೂ ಕೂರೇಶರು ಪ್ರೀತಿಯಿಂದ ವರ್ತಿಸಿದರು. ಇದರಿಂದ ತಮ್ಮ ತಪ್ಪನ್ನು ಅರಿತು ರಾಜನಕಡೆಯುವರು ಅವರನ್ನು ಶ್ರೀರಂಗಕ್ಕೆ ತಲುಪಿಸಿದರು. ಮುಂದೆ ಕೆಲವು ವರ್ಷಗಳಾದ ಮೇಲೆ ಕ್ರಿಮಿಕಂಠ ಚೋಳನು ಕುತ್ತಿಗೆಯಲ್ಲಿ ಹುಳುಬಿದ್ದು ಕಾಲವಾದನು.

## ೧೩

## ಜೈನಮತಾನುಯಾಯಿಯಾದ ವಿಠಲದೇವನನ್ನು ವೈಷ್ಣವನನ್ನಾಗಿಸಿದ್ದು

ಅತ್ತ ರಾಮಾನುಜರು ಕೂರೇಶರ ಮತ್ತು ಇತರ ಶಿಷ್ಯರ ಪ್ರಾರ್ಥನೆಯಂತೆ ಬಿಳಿಯ ವಸ್ತ್ರವನ್ನು ಧರಿಸಿ ಗೋವಿಂದ ಪರಾಶರ ಮುಂತಾದ ಕೆಲವು ಪ್ರಧಾನ ಶಿಷ್ಯರೊಂದಿಗೆ ಶ್ರೀರಂಗವನ್ನು ಬಿಟ್ಟು, ಚೋಳದೇಶವನ್ನು ದಾಟಿ ಕರ್ನಾಟಕದ ಕಡೆಗೆ ಬಂದರು. ದಾರಿಯಲ್ಲಿ ಒಂದು ದಟ್ಟವಾದ ಕಾಡಿಗೆ ಬಂದು ಸೇರಿದರು. ಅಲ್ಲಿ ಹಸಿವು ಬಾಯಾರಿಕೆಯಿಂದ ದಣಿದು ಆ ಕಾಡಿನಲ್ಲೇ ಎಲ್ಲರೂ ಮಲಗಿ ವಿಶ್ರಾಂತಿ ಪಡೆದರು. ಅಲ್ಲಿದ್ದ ಕೆಲವು ಚಂಡಾಲರು ಇವರ ಮೇಲೆ ಕರುಣೆ ಹೊಂದಿ ಇವರಿಗೆ ಹಣ್ಣುಹಂಪಲುಗಳನ್ನು ತಂದುಕೊಟ್ಟು ಚಳಿಗೆ ಕಾಯಿಸಿಕೊಳ್ಳಲು ಮರದ ಕಡ್ಡಿಗಳನ್ನು ಹಚ್ಚಿದರು. ಮಾರನೆಯದಿನ ಅಲ್ಲಿಗೆ ಸ್ವಲ್ಪ ದೂರದಲ್ಲಿ ವಾಸವಾಗಿದ್ದ ಶ್ರೀರಂಗದಾಸನೆಂಬ ಒಬ್ಬ ಬ್ರಾಹ್ಮಣನು ಇವರಿಗೆ ಸಂತೋಷದಿಂದ ಊಟಉಪಚಾರಾದಿ ಆತಿಥ್ಯ ಮಾಡಿದನು.

ಅಲ್ಲಿಂದ ಮುಂದೆ ಇವರು ಸಾಲಿಗ್ರಾಮಕ್ಕೆ ಹೋಗಿ ಸೇರಿದರು. ಜೈನ ಮತಾನುಯಾಯಿಗಳಾಗಿದ್ದ ಆ ಊರಿನ ಜನರು ಇವರ ಪ್ರಭಾವದಿಂದ ಶುದ್ಧ ವೈಷ್ಣವರಾದರು. ಅಲ್ಲಿದ್ದ ಅಂಧ್ರಪೂರ್ಣರೆಂಬುವವರು ರಾಮಾನುಜರ ಶ್ರೀಪಾದ ತೀರ್ಥವನ್ನು ಸ್ವೀಕರಿಸಿ ಅವರ ಪ್ರಿಯಶಿಷ್ಯರಾದರು. ಅವರು ರಾಮಾನುಜರ ಪಾದಗಳನ್ನು ಅಲ್ಲಿನ ತೀರ್ಥಕೊಳದ ಪಕ್ಕದಲ್ಲಿ ಶಿಲೆಯಲ್ಲಿ ಸ್ಥಾಪಿಸಿದರು. ಆ ಶ್ರೀಪಾದಗಳು ಇಂದಿಗೂ ಅಲ್ಲಿಯೇ ಇವೆ.

ಸಾಲಿಗ್ರಾಮದಿಂದ ರಾಮಾನುಜರು ತೊಂಡನೂರಿಗೆ ಬಂದರು. ಅಲ್ಲಿ ಜೈನ ಮತಾನುಯಾಯಿಯಾದ ವಿಠಲದೇವನೆಂಬುವನು ರಾಜ್ಯವಾಳುತ್ತಿದ್ದನು. ಅವನು ರಾಮಾನುಜರನ್ನು ಸಂದರ್ಶಿಸಿದನು. ಅವನ ಮಗಳ ಭೂತಪೀಡೆಯನ್ನು ರಾಮಾನುಜರು ತಮ್ಮ ಕೃಪಾಕಟಾಕ್ಷದಿಂದಲೂ, ಕಮಂಡಲುವಿನ ತೀರ್ಥಪ್ರೋಕ್ಷಣೆಯಿಂದಲೂ ಗುಣಪಡಿಸಿದರು. ಇದರಿಂದ ಸಂತೋಷಗೊಂಡ ಆ ರಾಜದಂಪತಿಗಳು ಅವರ ಶಿಷ್ಯರಾದರು. ಅಲ್ಲಿದ್ದ ಸಾವಿರಾರು ಜೈನ ಸನ್ಯಾಸಿಗಳೊಂದಿಗೆ ರಾಮಾನುಜರು ಧೈರ್ಯವಾಗಿ ವಾದ ಮಾಡಿ ಅವರೆಲ್ಲರನ್ನೂ ಸೋಲಿಸಿದರು. ವಿಠಲದೇವನು ವೈಷ್ಣವಮತವನ್ನು ಅಂಗೀಕರಿಸಿ ರಾಮಾನುಜರ ಶಿಷ್ಯನಾದನು. ರಾಮಾನುಜರು ಅವನಿಗೆ ವಿಷ್ಣುವರ್ಧನನೆಂಬ ಹೆಸರನ್ನು ದಯಪಾಲಿಸಿದರು. ವಿಷ್ಣುವರ್ಧನನು ತೊಂಡನೂರಿನಲ್ಲಿ ತಿರುಮಲಸಾಗರವೆಂಬ ದೊಡ್ಡಕೆರೆಯೊಂದನ್ನೂ, ಶ್ರೀ ವೈಷ್ಣವ ಭೋಜನಶಾಲೆಯನ್ನೂ ಕಟ್ಟಿಸಿದನು. ಹಾಗೆಯೇ ನುರಿತ ಶಿಲ್ಪಿಗಳಿಂದ ನಂಬಿನಾರಾಯಣ ದೇವರ ದೊಡ್ಡ ದೇವಾಲಯವೊಂದನ್ನು ಕಟ್ಟಿಸಿದನು.

# ರಾಮಾನುಜರು ಯಾದವಾದ್ರಿಗೆ ಬಂದದ್ದು

ರಾಮಾನುಜರು ತೊಂಡನೂರಿನಿಂದ ಯಾದವಾದ್ರಿಗೆ ಬಂದ ಸೇರಿದರು. ಅದು ಇಂದಿಗೂ 'ಮೇಲುಕೋಟೆ', 'ತಿರುನಾರಾಯಣಪುರ' ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿದೆ. ಅಲ್ಲಿ ಬೆಟ್ಟದಮೇಲೆ ಶ್ರೀ ನರಸಿಂಹಸ್ವಾಮಿಯ ದೇವಸ್ಥಾನವಿದೆ. ಅದರ ತಪ್ಪಲಲ್ಲಿರುವ ಕಲ್ಯಾಣಿ ತೀರ್ಥದ ಬಳಿ ತುಳಸಿ ವನದಲ್ಲಿದ್ದ ಒಂದು ಹುತ್ತದಲ್ಲಿ ರಾಮಾನುಜರಿಗೆ ಯಾದವಾದ್ರಿ ಪತಿಯ ವಿಗ್ರಹವು ೧೦೨೦ ಶಕವರ್ಷದಲ್ಲಿ ಲಭಿಸಿತು. ಅಲ್ಲಿದ್ದ ಗ್ರಾಮ ಜನರ ಸಹಾಯ ದಿಂದ ರಾಮಾನುಜರು ತಾವೇ ಸ್ವತಃ ನಿಂತು ಒಂದು ದೇವಾಲಯವನ್ನು ಕಟ್ಟಿಸಿ ಅದರಲ್ಲಿ ಯಾದವಾದ್ರಿ ಪತಿಯಾದ ತಿರುನಾರಾಯಣಮೂರ್ತಿಯ ವಿಗ್ರಹವನ್ನು ಆಗಮಶಾಸ್ತ್ರದ ಪ್ರಕಾರ ಪ್ರತಿಷ್ಠಾಪನೆ ಮಾಡಿದರು. ದೇವ ಸ್ಥಾನಕ್ಕೆ ಒಂದು ಉತ್ಸವ ಮೂರ್ತಿಯನ್ನು ಸ್ಥಾಪನೆ ಮಾಡಬೇ ಕೆಂದು ಚಿಂತಿಸುತ್ತಿದ್ದಾಗ ಅವರಿಗೆ ದೆಹಲಿಯ ಸುಲ್ತಾನನ ಹತ್ತಿರ 'ರಾಮ ಪ್ರಿಯ'ನೆಂಬ ಉತ್ಸವ ಮೂರ್ತಿಯು ಇರುವುದು ತಿಳಿಯಿತು. ಒಡನೆ ಅವರು ಅದನ್ನು ತಂದು ದೇವಸ್ಥಾನದಲ್ಲಿ ಪ್ರತಿಷ್ಠೆ ಮಾಡುವುದಕ್ಕಾಗಿ ತಮ್ಮ ಕೆಲವು ಶಿಷ್ಯರೊಂದಿಗೆ ದೆಹಲಿಗೆ ಪ್ರಯಾಣ ಮಾಡಿ ೨ ತಿಂಗಳ ಹೊತ್ತಿಗೆ ಅಲ್ಲಿಗೆ ಸೇರಿದರು. ರಾಮಾನುಜರು ದೆಹಲಿಯ ಸುಲ್ತಾನರ ಪ್ರೀತಿಯನ್ನು ಸಂಪಾದಿ ಸಲು ಅವರು ರಾಮಾನುಜರಿಗೆ ತಾವು ಲೂಟಿ ಮಾಡಿ ತಂದಿದ್ದ ವಿಗ್ರಹಗಳ ಸಂಗ್ರಹಾಲಯದಲ್ಲಿದ್ದ ವಿಗ್ರಹಗಳನ್ನೆಲ್ಲಾ ತೋರಿಸಿದರು. ಆದರೆ ಅದರಲ್ಲಿ ರಾಮ ಪ್ರಿಯನ ವಿಗ್ರಹವು ಕಾಣಲಿಲ್ಲ. ಕೊನೆಗೆ ತಮ್ಮ ಮಗಳು ಪ್ರೀತಿಯಿಂದ ಇಟ್ಟು ಕೊಂಡಿದ್ದ ಸುಂದರವಾದ ವಿಗ್ರಹವೊಂದನ್ನು ಸುಲ್ತಾನರು ತೋರಿಸಿದರು. ರಾಮಾನುಜರು ಪ್ರೀತಿಯಿಂದ ಕರೆಯಲು ಅದು ಓಡೋಡಿ ಅವರ ಹತ್ತಿರ ಬಂದು ಅವರ ತೊಡೆಯಮೇಲೆ ಕುಳಿತುಕೊಂಡುದಾಗಿಯೂ, ರಾಮಾನುಜರು ಅದನ್ನು "ಶೆಲ್ವಪಿಳ್ಳೆ", "ಸಂಪತ್ಕುಮಾರ" ಎಂದು ಕರೆದುದಾ ಗಿಯೂ ಒಂದು ಪುರಾಣ ಕತೆ ಇದೆ. ಇದನ್ನು ಕಂಡು ಆಶ್ಚರ್ಯ ಹೊಂದಿ ಸುಲ್ತಾನರು ಆ ವಿಗ್ರಹವನ್ನು ತೆಗೆದುಕೊಂಡುಹೋಗಲು ರಾಮಾನುಜರಿಗೆ ಅನುಮತಿ ಇತ್ತರು. ಕೂಡಲೇ ರಾಮಾನುಜರು ತಮ್ಮ 'ಶೆಲ್ವಪಿಳ್ಳೆ' ವಿಗ್ರಹ ವನ್ನು ಎತ್ತಿಕೊಂಡು ರಾತ್ರಿಹಗಲೂ ಯಾದವಾದ್ರಿಯ ಕಡೆಗೆ ಪ್ರಯಾಣ ಮಾಡಿ ದರು. ಬಹಳ ದೂರದ ಪ್ರಯಾಣವಾದುದರಿಂದ ದಾರಿಯಲ್ಲಿ ಚಂಡಾಲರು ಅವರಿಗೆ ಬಹಳ ಸಹಾಯ ಮಾಡಿ ಆ ವಿಗ್ರಹವನ್ನು ಯಾದವಾದ್ರಿಗೆ ತಲು ಪಿಸಿದರು. ರಾಮಾನುಜರು ಆ ವಿಗ್ರಹವನ್ನು ದೇವಸ್ಥಾನದಲ್ಲಿ ಉತ್ಸವಮೂರ್ತಿ ಯಾಗಿ ಪ್ರತಿಷ್ಠಾಪನೆ ಮಾಡಿದರು.

ಇತ್ತ ದೆಹಲಿ ಸುಲ್ತಾನರ ರಾಜಕುಮಾರಿ ಬೀಬಿ ಲಚ್ಚುಮಾರಳಿಗೆ ಒಬ್ಬ ಬ್ರಾಹ್ಮಣ ಸನ್ಯಾಸಿಯು ತನ್ನ ಪ್ರೀತಿಯ ವಿಗ್ರಹವನ್ನು ಎತ್ತಿಕೊಂಡುಹೋದ

ಸಮಾಚಾರವು ತಿಳಿಯಲು ಒಡನೆ ಅವಳು ದುಃಖಭರಿತಳಾಗಿ ತಾನೂ ಅದರ ಹಿಂದೆ ಹೋಗಬೇಕೆಂದು ಹೊರಟುಬಿಟ್ಟಳು. ಆಗ ಸುಲ್ತಾನರು ಅವಳನ್ನು 'ಒಂದು ಪಲ್ಲಕ್ಕಿ'ಯಲ್ಲಿ ಕೂರಿಸಿ ಸೈನ್ಯದೊಂದಿಗೆ ದಕ್ಷಿಣ ದೇಶಕ್ಕೆ ಕಳುಹಿಸಿದರು. ಅವರು ದಾರಿ ತಿಳಿಯದೆ ಮೈಸೂರು ದೇಶಕ್ಕೆ ಬಂದು, ಜೇನುನೊಣಕ್ಕೆ ಜೇನು ಇರುವ ಸ್ಥಳವು ತಿಳಿಯುವಂತೆ ಅವಳಿಗೆ ತಾನಾಗಿಯೇ ತನ್ನ ಪ್ರಿಯದೇವ ರಿರುವ ಸ್ಥಳವು ಅರಿವಾಗಿ ಅವಳು ಯಾದವಾದ್ರಿಗೆ ಬಂದು ಭಕ್ತಿಪರವಶಳಾಗಿ ರಾಮಪ್ರಿಯನ ಕಾಲಡಿಯಲ್ಲಿ ಬಿದ್ದಳು. ಅವಳನ್ನು ತಡೆಯಲು ಯಾರಿಗೂ ಧೈರ್ಯವಾಗಲಿಲ್ಲ. ಅವಳ ಅಂತರಂಗ ಭಕ್ತಿಯಿಂದ ಅವಳು ತನ್ನ ಆರೋಗ್ಯ, ಜಾತಿ, ಧರ್ಮ ಮತ ಯಾವುದನ್ನೂ ಲೆಕ್ಕಿಸದೆ ರಾಮಪ್ರಿಯನ ಬಳಿ ಸೇರಿ ತನ್ನ ದೇಹ ತ್ಯಾಗ ಮಾಡಿ ಅವನಲ್ಲಿ ಐಕ್ಯವಾದಳು. ಇಂದಿಗೂ ಅವಳ ಭಕ್ತಿಯ ತ್ಯಾಗದ ಗುರುತಾಗಿ ಅವಳ ವಿಗ್ರಹವನ್ನು ಬೀಬಿನಾಚ್ಚಿಯಾರ್ ಎಂಬ ಹೆಸರಿನಲ್ಲಿ ಯಾದವಾದ್ರಿಯಲ್ಲಿ ಶೆಲ್ವಪಿಳ್ಳೆಯ ಬಳಿ ಇಟ್ಟಿದ್ದಾರೆ. ಇದರಿಂದ ರಾಮಾನುಜರು ಜಾತಿಮತಗಳಿಗಿಂತ ಶ್ರದ್ಧಾಭಕ್ತಿಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಿದ್ದರೆಂದು ವ್ಯಕ್ತವಾಯಿತು. ರಾಮಾನುಜರು ಕಲ್ಯಾಣಿ ತೀರ್ಥಕ್ಕೆ ಸ್ವಲ್ಪ ದೂರದಲ್ಲಿ ಹಾಲಿನಂತೆ ಬೆಳ್ಳಗೂ, ಶುದ್ಧವಾಗಿಯೂ ಇರುವ 'ತಿರುಮಣ್' ಕಂಡುಹಿಡಿದರು. ಅದನ್ನು ಇಂದಿಗೂ ಅವರ ಶಿಷ್ಯರು ಉಪಯೋಗಿಸುತ್ತಿದ್ದಾರೆ.

ಹೀಗೆ ರಾಮಾನುಜರು ಯಾದವಾದ್ರಿಯಲ್ಲಿ ತಿರುನಾರಾಯಣಸ್ವಾಮಿಗೆ ದೇವಾಲಯವನ್ನು ಕಟ್ಟಿಸಿ ಅದರಲ್ಲಿ ಶೆಲ್ವಪಿಳ್ಳೆಯ ಉತ್ಸವಮೂರ್ತಿಯನ್ನು ಪ್ರತಿಷ್ಠಾಪಿಸಿ ಪ್ರಖ್ಯಾತಿ ಪಡೆದರು. ದೇವಸ್ಥಾನದ ಪೂಜಾಕ್ರಮಗಳನ್ನು ದೈವ ಕೈಂಕರ್ಯ ಉತ್ಸವಾದಿಗಳೆಲ್ಲವನ್ನು ಸರಿಯಾಗಿ ಏರ್ಪಾಡು ಮಾಡಿದರು. ತಮಗೆ ಡೆಲ್ಲಿಯಿಂದ ವಿಗ್ರಹವನ್ನು ತರಲು ಮತ್ತು ದೇವಸ್ಥಾನವನ್ನು ಕಟ್ಟಲು ನೆರವಾದ ಚಂಡಾಲರಿಗೆ ತಿರುಕುಲತ್ತಾರ್ ಎಂದು ಹೆಸರಿಟ್ಟು ವರ್ಷದಲ್ಲಿ ೩ ದಿನ ಅವರಿಗೆ ಗುಡಿ ಒಳಗಡೆ ಬಂದು ದೇವರ ದರ್ಶನ ಪಡೆಯಲು ಅನುಮತಿ ನೀಡಿದರು ಅದು ಇಂದಿಗೂ ನಡೆದುಬರುತ್ತಿದೆ. ರಾಮಾನುಜರು ಮೇಲುಕೋಟೆಯಲ್ಲಿ ಯತಿರಾಜ ಮಠವನ್ನು ಸ್ಥಾಪನೆ ಮಾಡಿ ಅಲ್ಲಿ ವೇದಾಂತ, ಶ್ರೀಭಾಷ್ಯ, ಗೀತಾಭಾಷ್ಯ, ದಿವ್ಯಪ್ರಬಂಧಗಳು ಮುಂತಾದುವನ್ನು ಅನೇಕ ಶಿಷ್ಯರಿಗೆ ಉಪದೇಶ ಮಾಡುತ್ತಾ ೧೨ ವರ್ಷಗಳ ಕಾಲ ಯಾದವಾದ್ರಿಯಲ್ಲಿದ್ದರು.

ರಾಮಾನುಜಾಚಾರ್ಯರ ನಿತ್ಯಕಾಲಕ್ಷೇಪದ ವೈಭವವನ್ನು ಅನುಭವಿಸುತ್ತಿದ್ದ ಅವರ ಮುಖ್ಯ ಶಿಷ್ಯರುಗಳು ಅವರು ತಮ್ಮ ಅರ್ಚಾ ವಿಗ್ರಹವೊಂದನ್ನು ಮೇಲುಕೋಟೆಯಲ್ಲಿ ಸ್ಥಾಪಿಸಿ ಸರ್ವರಿಗೂ ಸರ್ವಕಾಲದಲ್ಲೂ ದರ್ಶನ ನೀಡಬೇಕೆಂದು ಪ್ರಾರ್ಥಿಸಲು ಅದಕ್ಕೆ ರಾಮಾನುಜರು ಒಪ್ಪಿದರು. ಕೂಡಲೇ ಅವರು ಒಂದು ವಿಗ್ರಹವನ್ನು ಮಾಡಿಸಲು ರಾಮಾನುಜರು ಅದನ್ನು ಆಲಿಂಗಿಸಿ

ಅಭಿಮಾನಿಸಿದರು. ಆ ವಿಗ್ರಹವನ್ನು ಶಿಷ್ಯರುಗಳು ಯಾದವಾದ್ರಿಯಲ್ಲಿ ಪ್ರತಿಷ್ಠಾಪನೆ ಮಾಡಿದ್ದಾರೆ. ಅದರ ದರ್ಶನವನ್ನು ಇಂದಿಗೂ ಎಲ್ಲರೂ ಪಡೆಯಬಹುದು.★

೧೫

# ರಾಮಾನುಜರು ಶ್ರೀರಂಗದಲ್ಲಿ ತಮ್ಮ ಕೊನೆಯ ಕಾಲವನ್ನು ಕಳೆದದ್ದು

ರಾಮಾನುಜರಿಗೆ ಈ ರೀತಿ ಯಾದವಾದ್ರಿಯಲ್ಲಿ ೧೨ ವರ್ಷಗಳು ಕಳೆದ ಮೇಲೆ ಅಲ್ಲಿ ತಮ್ಮ ಕರ್ತವ್ಯವು ಮುಗಿಯಿತೆಂಬ ಭಾವನೆಯೂ, ಅದರೊಂದಿಗೆ ಶ್ರೀರಂಗನಾಥಸ್ವಾಮಿಯ ದರ್ಶನ ಮಾಡಬೇಕೆಂಬ ತ್ವರೆಯೂ ಉಂಟಾಯಿತು. ಇಷ್ಟರವೇಳೆಗೆ ಕ್ರಿಮಿಕಂಠಚೋಳನ ಕಾಲವು ಮುಗಿದಿದ್ದುದರಿಂದ ಅವರು ತಮ್ಮ ಶಿಷ್ಯರೊಂದಿಗೆ ಮೇಲುಕೋಟೆಯಿಂದ ಹೊರಟು ಶ್ರೀರಂಗಕ್ಕೆ ಹೋಗಿ ಸೇರಿದರು. ಶ್ರೀರಂಗದಲ್ಲಿ ರಾಮಾನುಜನನ್ನು ಎದುರುಗೊಳ್ಳಲು ತಮ್ಮ ಪತ್ನಿ ಆಂಡಾಳ್ ಮತ್ತು ಪುತ್ರ ಪರಾಶರರೊಂದಿಗೆ ಕೂರೇಶರು ಬಂದರು. ಕಣ್ಣನ್ನು ಕಳೆದುಕೊಂಡು ಮಂದುಕರಾಗಿದ್ದ ಅವರನ್ನು ಬಿಗಿದಪ್ಪಿಕೊಂಡು ಅವರ ದುಃಸ್ಥಿತಿಯನ್ನು ನೋಡಿ ದುಃಖಪಟ್ಟರು. ತಮ್ಮನ್ನು ಕಾಪಾಡಲು ಅವರ ಕಣ್ಣುಗಳನ್ನೇ ಸಮರ್ಪಿಸಿದ ಕೂರೇಶರ ತ್ಯಾಗವನ್ನು ಬಹಳವಾಗಿ ಪ್ರಶಂಸಿಸಿದರು. ಕಾಂಚೀಪುರಕ್ಕೆ ಹೋಗಿ ವರದರಾಜಸ್ವಾಮಿಯನ್ನು ಪ್ರಾರ್ಥಿಸಿ ಕಣ್ಣುಗಳನ್ನು ಪಡೆಯುವಂತೆ ಅವರಿಗೆ ಹೇಳಿದರು. ಆದರೆ ಕೂರೇಶರಿಗೆ ತಮ್ಮ ಕಣ್ಣುಗಳನ್ನು ಪಡೆಯುವ ಆತುರವೇ ಇರಲಿಲ್ಲ. ಅವರು ತನ್ನಲ್ಲಿದ್ದುದನ್ನು ಇತರರಿಗೆ ಕೊಡುತ್ತಿದ್ದರೇ ಹೊರತು ಇತರರಿಂದ ತಾವು ಏನನ್ನೂ ತೆಗೆದುಕೊಳ್ಳದೆ ದೇವರು ತಮಗೆ ಕೊಟ್ಟಿದ್ದರಲ್ಲಿ ತೃಪ್ತಿ ಹೊಂದಿದ್ದರು. ಆದರೆ ತಮ್ಮ ಗುರುಗಳಾದ ರಾಮಾನುಜರ ಆಜ್ಞೆಯನ್ನು ಮೀರಲಾರದೆ ಕಾಂಚೀಪುರಕ್ಕೆ ಹೋಗಿ ವರದರಾಜಸ್ವಾಮಿಯನ್ನು ತಮ್ಮ ಕಣ್ಣುಗಳನ್ನು ದಯಪಾಲಿಸುವಂತೆ ಪ್ರಾರ್ಥಿಸಿದರು. ಪರಮಾತ್ಮನಿಂದ ಕಣ್ಣುಗಳನ್ನು ಪಡೆದು, ದೇವರ ದರ್ಶನ ಮಾಡಿ ಶ್ರೀರಂಗಕ್ಕೆ ಬಂದು ತಮ್ಮ ಗುರುಗಳಾದ ರಾಮಾನುಜರ ಸೇವೆಯಲ್ಲಿ ನಿರತರಾದರು. ಭಗವಂತನ ಸ್ತೋತ್ರ ಮಾಡುತ್ತಾ ಅವನ ರೂಪಗುಣಾದಿಗಳನ್ನು ಅನುಭವಿಸುತ್ತಾ ಕಾಲ ಕಳೆದರು. ಅವರು ನೇತ್ರಹೀನರಾಗಿದ್ದ ಕಾಲದಲ್ಲಿ ಪಂಚಸ್ತವಗಳಾದ ಶ್ರೀಸ್ತವ, ವರದರಾಜಸ್ತವ, ಸುಂದರಬಾಹುಸ್ತವ, ಅತಿಮಾನುಷಸ್ತವ ಮತ್ತು ವೈಕುಂಠಸ್ತವ ಇವುಗಳನ್ನು ರಚಿಸಿದರು.

ರಾಮಾನುಜರು ತಮ್ಮ ಶಿಷ್ಯರಾದ ತಿರುಕ್ಕುರುಹೈಪ್ಪಿರಾನ್ ಪಿಳ್ಳಾನ್ ಎಂಬುವವರಿಂದ ತಿರುವಾಯ್ಮೊಳಿ ದಿವ್ಯಪ್ರಬಂಧಕ್ಕೆ ಆರಾಯಿರಪ್ಪಡಿ ಎಂಬ ವ್ಯಾಖ್ಯಾನವನ್ನು ಬರೆಸಿ ಅದನ್ನು ತಾವೇ ಪರಿಶೀಲಿಸಿ ನೋಡಿದರು ಮತ್ತು ಅದನ್ನು ಎಲ್ಲರೂ ಅವಶ್ಯವಾಗಿ ಕಾಲಕ್ಷೇಪ ಮಾಡಬೇಕೆಂದು ತಿಳಿಸಿದರು. ಯಾಮುನಾಚಾರ್ಯರಿಗೆ ಕೊಟ್ಟ ದಿವ್ಯ ಪ್ರಬಂಧಗಳನ್ನು ಪ್ರಚಾರ ಮಾಡುವ ವಾಗ್ದಾನವನ್ನು ನೆರವೇರಿಸಿದರು. ಶ್ರೀರಂಗದಲ್ಲಿ ಅರವತ್ತು ವರ್ಷಗಳ ಕಾಲ ಭಗವಂತನ ಸೇವೆ ಕೈಂಕರ್ಯಾದಿಗಳನ್ನು ಮಾಡುತ್ತಲೂ ತಮ್ಮ ಶಿಷ್ಯರಿಗೆ ದಿವ್ಯ ಪ್ರಬಂಧಗಳ, ಶ್ರೀಭಾಷ್ಯ ಗೀತಾಭಾಷ್ಯಗಳ ಉಪದೇಶಗಳನ್ನು ಮಾಡುತ್ತಲೂ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡುತ್ತಲೂ ಕಾಲವನ್ನು ಕಳೆದರು.

ಯಾಮುನಾಚಾರ್ಯರ ಅಭಿಲಾಷೆಗಳನ್ನೆಲ್ಲಾ ಕಾರ್ಯತಃ ಪೂರ್ತಿ ಮಾಡಿ ಕೃತಾರ್ಥರಾದರು.

ಕೆಲವು ವರ್ಷಗಳಾದ ಮೇಲೆ ಕೂರೇಶರು ದೇವರ ಪಾದಾರವಿಂದವನ್ನು ಸೇರಿದರು. ಅವರ ಕಾಲವಾದ ಮೇಲೆ ಅವರ ಪುತ್ರರಾದ ಪರಾಶರಭಟ್ಟರು ದೊಡ್ಡ ವಿದ್ವಾಂಸರಾಗಿಯೂ ಭಗವದ್ಭಕ್ತರಾಗಿಯೂ ಇದ್ದುದರಿಂದ ರಾಮಾನುಜರು ಅವರನ್ನು ತಮ್ಮ ಪ್ರಧಾನ ಶಿಷ್ಯರನ್ನಾಗಿ ಮಾಡಿಕೊಂಡು ಅವರಿಗೆ ಎಂಬಾರ್ರವರ ಮೂಲಕ ಶಾಸ್ತ್ರಾಭ್ಯಾಸಗಳನ್ನು ಚೆನ್ನಾಗಿ ಮಾಡಿಸಿದರು. ಪರಾಶರಭಟ್ಟರು ಭಗವದ್ಗುಣದರ್ಪಣವೆಂಬ ವಿಷ್ಣುಸಹಸ್ರನಾಮ ಭಾಷ್ಯವನ್ನೂ, ಶ್ರೀಗುಣರತ್ನ ಕೋಶವೆಂಬ ಲಕ್ಷ್ಮಿಸ್ತೋತ್ರವನ್ನೂ ರಚಿಸಿದರು. ಪರಾಶರ ಭಟ್ಟರನ್ನು ಮುಂದೆ ತಮ್ಮ ಗುರುಪೀಠಕ್ಕೆ ಆಚಾರ್ಯರನ್ನಾಗಿ ನಿಯಮಿಸಿದರು.

ಗೋದಾದೇವಿಯು ರಚಿಸಿದ ನಾಚ್ಚಿಯಾರ್ ತಿರುಮೊಳಿಯಲ್ಲಿ "ನೂರು ತಡಾ ನಿರೈಂದ ಅಕ್ಕಾ ರವಡಿಶಲ್ ಶೊನ್ನೇನ್" ಎಂದು ಹೇಳಿರುವುದನ್ನು ತಾವು ಅವಳ ಪರವಾಗಿ ಕಾರ್ಯತಃ ಪೂರ್ತಿ ಮಾಡಬೇಕೆಂದು ರಾಮಾನುಜರು ತಮ್ಮ ಶಿಷ್ಯರೊಂದಿಗೆ ಮಾಲಿರಾಶೋಲೈಗೆ ಹೋಗಿ ನೂರು ಪಾತ್ರೆಗಳಲ್ಲಿ ಬೆಣ್ಣೆಯನ್ನೂ, ಸಕ್ಕರೆಪೊಂಗಲನ್ನೂ ದೇವರಿಗೆ ನೈವೇದ್ಯ ಮಾಡಿ ಸಮರ್ಪಿಸಿದರು. ಅಲ್ಲಿಂದ ಶ್ರೀವಿಲ್ಲಿಪುತ್ತೂರಿಗೆ ಗೋದಾದೇವಿಯ ಮತ್ತು ರಂಗಮನ್ನಾರ್ರವರ ದರ್ಶನ ಮಾಡಿದರು. ಇದರಿಂದ ಅವರಿಗೆ ಗೋದಾಗ್ರಜರೆಂಬ ಹೆಸರು ಬಂದಿತು. ಅಲ್ಲಿಂದ ಆಳ್ವಾರ್ ತಿರುನಗರಿಗೆ ಬಂದು ನಮ್ಮಾಳ್ವಾರ್ ಅವರ ದರ್ಶನ ಮಾಡಿ ಶ್ರೀರಂಗವನ್ನು ತಲುಪಿದರು,

ಮೇಲುಕೋಟೆಯಲ್ಲಿ ಪ್ರತಿಷ್ಠಾಪನೆ ಮಾಡಿದಂತೆ ಅವರ ಜನ್ಮಸ್ಥಾನವಾದ ಪೆರಂಬೂದೂರಿನಲ್ಲೂ ಮತ್ತು ಶ್ರೀರಂಗದಲ್ಲೂ ರಾಮಾನುಜರ ಕಾಲದಲ್ಲೇ ಅವರ ಶಿಷ್ಯರುಗಳು ಅವರ ಅರ್ಚಾ ವಿಗ್ರಹಗಳನ್ನು ಮಾಡಿಸಿ ಅಲ್ಲಿನ ದೇವಸ್ಥಾನಗಳಲ್ಲಿ ಪ್ರತಿಷ್ಠಾಪನೆ ಮಾಡಿದರು. ಆ ವಿಗ್ರಹಗಳನ್ನು ರಾಮಾನುಜರು ಆಲಂಗಿಸಿ ಅಭಿಮಾನಿಸಿದ್ದಾರೆ. ಇಂದಿಗೂ ಭಕ್ತಾದಿಗಳು ಆ ವಿಗ್ರಹಗಳ ದರ್ಶನ ಭಾಗ್ಯವನ್ನು ಪಡೆಯುತ್ತಿದ್ದಾರೆ.

# ರಾಮಾನುಜರ ಕೊನೆಯ ಸಂದೇಶ

ಶ್ರೀರಂಗಕ್ಕೆ ಬಂದು ಅರವತ್ತು ವರ್ಷಗಳಾದ ಮೇಲೆ ರಾಮಾನುಜರು ಅವರ ೧೨೦ ನೆಯ ವಯಸ್ಸಿನಲ್ಲಿ ದೇವರ ಪಾದಾರವಿಂದವನ್ನು ಸೇರಿದರು. ಅವರು ಕಾಲವಾಗುವುದಕ್ಕೆ ಮೊದಲು ಅವರ ಶಿಷರನ್ನೆಲ್ಲಾ ಒಟ್ಟುಗೂಡಿಸಿ ಅವರಿಗೆಲ್ಲ ಉಪದೇಶ ನೀಡಿದರು. ತಾವು ಕಾಲವಾದಮೇಲೆ ಅವರಾರೂ ದುಃಖಿಸಕೂಡದೆಂದು ಹೇಳಿ ಪ್ರಸನ್ನನಾದವನು ಯಾವ ರೀತಿ ಇರಬೇಕೆಂಬುದನ್ನು ಅವರಿಗೆ ಉಪದೇಶ ಮಾಡಿದರು. ಪ್ರಸನ್ನನಾದವನು ಪರಮಾತ್ಮನಲ್ಲಿ ಆತ್ಮಸಮರ್ಪಣೆ ಮಾಡಿರುವುದರಿಂದ ತನ್ನ ಆತ್ಮನ ಶ್ರೇಯಸ್ಸು ಈಶ್ವರನಿಗೆ ಸೇರಿರುವುದೆಂದರಿತು ಅದರ ವಿಷಯವಾಗಿ ಅವನು ಯಾವ ವಿಧವಾದ ವ್ಯಸನವನ್ನು ಹೊಂದಕೂಡದು ಅವನ ದೇಹದ ಯಾತ್ರೆಯು ಅವನ ಕರ್ಮಾಧೀನವಾದುದರಿಂದ ಅದರ ವಿಷಯವಾಗಿಯೂ ಯಾವ ಚಿಂತೆಯನ್ನೂ ಹೊಂದಕೂಡದು. ಆದ್ದರಿಂದ ಅವನು ತನ್ನ ಆತ್ಮನನ್ನು ಕುರಿತಾಗಲೀ, ದೇಹವನ್ನು ಕುರಿತಾಗಲೀ ತನಗೆ ಯಾವ ಸ್ವಾತಂತ್ರ್ಯವೂ ಇಲ್ಲವೆಂಬುದನ್ನರಿತು ಕೇವಲ ಅದಕ್ಕಾಗಿ ಶ್ರಮಿಸದೆ ಭಗವದ್ಭಾಗವತರ ಕೈಂಕರ್ಯದಲ್ಲಿ ನಿರತನಾಗಿರಬೇಕು.

ಲೋಕದ ಜನರು ಅನುಕೂಲರೆಂದೂ, ಪ್ರತಿಕೂಲರೆಂದೂ, ಅನುಭಯರೆಂದೂ ಮೂರು ವಿಧವಾಗಿರುವರು.

ಅನುಕೂಲರು – ಭಗವದ್ಭಕ್ತರೂ, ಭಾಗವತರೂ, ಅನುಕೂಲರು. ಅವರನ್ನು ಕಂಡರೆ ತಮಗೆ ಅಭಿಮತವಾದ ವಸ್ತುವನ್ನು, ಫಲಪುಷ್ಪಾದಿಗಳನ್ನು ಕಂಡಂತೆ ಸಂತೋಷಪಡಬೇಕು, ಅವನನ್ನು ಅವಮಾನಿಸಿದರೆ ರಾಜಪುತ್ರನನ್ನು ಅವಮಾನಪಡಿಸಿದರೆ ರಾಜನಿಗೆ ಕೋಪ ಬರುವಂತೆ ಪರಮಾತ್ಮನ ಕೋಪಕ್ಕೆ ಈಡಾಗಬೇಕಾಗುವುದು.

ಪ್ರತಿಕೂಲರು – ಭಗವದ್ಭಾಗವತ ದ್ವೇಷಿಗಳು ಪ್ರತಿಕೂಲರು. ಅವರನು ಕಂಡರೆ, ಅಗ್ನಿಸರ್ಪಾದಿಗಳನ್ನು ಕಂಡರೆ ಭಯಗೊಂಡು ಎಚ್ಚರಿಕೆಯಿಂದ ವರ್ತಿಸಬೇಕು. ಅವರನ್ನು ಅರ್ಥಕಾಮಗಳನ್ನು ಪಡೆಯುವುದಕ್ಕಾಗಿ ಆದರಿಸಿದರೆ, ರಾಜಮಹಿಷಿಯು ಬೀದಿಯಲ್ಲಿರುವವರನ್ನು ಭಿಕ್ಷೆ ಬೇಡಿದರೆ ಅವಮಾನ ಹೊಂದಿದ ರಾಜನು ಕೋಪಗೊಳ್ಳುವಂತೆ ಪರಮಾತ್ಮನ ಕೋಪಕ್ಕೆ ಈಡಾಗಬೇಕಾವುದು.

ಅನುಭಯರು – ಸಂಸಾರಿಗಳು ಅನುಭಯರು. ಅವರನ್ನು ಕಂಡರೆ ಹುಲ್ಲುಕಡ್ಡಿಗಳನ್ನು ಕಂಡಂತೆ ಸಂತೋಷ ಭಯ ಯಾವುದೂ ಇಲ್ಲದೆ ಅವರೊಂದಿಗೆ ಸಾಧಾರಣವಾಗಿ ವರ್ತಿಸಬೇಕು, ಅವರನ್ನು ಅರ್ಥಕಾಮ ಪುರುಷಾರ್ಥಗಳಿಗಾಗಿ ಆದರಿಸಿ ಬೇಡಿದರೆ ರತ್ನಕ್ಕೂ ಗಾಜಿಗೂ ಇರುವ ವ್ಯತ್ಯಾಸವು ಅರಿವಾದಂತಾಗಿ ಅವರು ಮಾಡುವ ಪ್ರಯತ್ನವೆಲ್ಲಾ ನಿಷ್ಫಲವಾಗುವವು ಮತ್ತು ಪರಮಾತ್ಮನು ಅವರನ್ನು ಅನುಸರಿಸುವನು.

ದೈವ ಮಂತ್ರವೇ ಶ್ರೇಷ್ಠವಾದ ಮಂತ್ರ; ಶ್ರೀಮನ್ನಾರಾಯಣನೇ ಮೇಲಾದ ದೈವ; ಭಗವದ್ಭಾಗವತರ ಕೈಂಕರ್ಯವೇ ಮೇಲಾದ ಪುರುಷಾರ್ಥ, ಆಚಾರ್ಯಾಭಿಮಾನದಿಂದ ಮೋಕ್ಷ ಪ್ರಾಪ್ತಿ ಮತ್ತು ಭಾಗವತೋಪಚಾರವು ಮೋಕ್ಷಕ್ಕೆ ಪ್ರಬಲವಾದ ವಿರೋಧಿ ಎಂದು ಉಪದೇಶ ಮಾಡಿದರು.

ಕೊನೆಯದಾಗಿ ಆರು ವಿಧವಾದ ಕೈಂಕರ್ಯಗಳನ್ನು ತಿಳಿಸಿ ಅವುಗಳಲ್ಲಿ ಯಾರು ಯಾರಿಗೆ ಯಾವ ಯಾವ ಕೈಂಕರ್ಯವನ್ನು ಮಾಡಲು ಶಕ್ತಿ ಇದೆಯೋ ಅದನ್ನು ಅವರವರು ಮಾಡಬೇಕೆಂದು ತಿಳಿದರು.

ಅವು ಯಾವುದೆಂದರೆ:-

೧. ಶ್ರೀಭಾಷ್ಯವನ್ನು ಗುರು ಮುಖೇನ ಅರ್ಥಸಹಿತ ವ್ಯಾಸಂಗ ಮಾಡಿ ಇತರರಿಗೆ ಬೋಧಿಸುವುದು. ಇದನ್ನು ಮಾಡಲಾಗದಿದ್ದರೆ

೨. ದ್ರಾವಿಡ ದಿವ್ಯಪ್ರಬಂಧವನ್ನು ಅರ್ಥಾನುಸಂಧಾನದೊಂದಿಗೆ ಅಧ್ಯಯನ ಮಾಡುವುದು. ಇದೂ ಆಗದಿದ್ದರೆ

೩. ದಿವ ದೇಶಗಳಲ್ಲಿ ವಾಸ ಮಾಡುತ್ತಾ ಅಲ್ಲಿನ ಅರ್ಚಾಮೂರ್ತಿಗಳಿಗೆ ಧೂಪ, ದೀಪ, ನೈವೇದ್ಯ, ಪ್ರದಕ್ಷಿಣ, ನಮಸ್ಕಾರ ಸ್ತೋತ್ರಾದಿ ಕೈಂಕರ್ಯ ಮಾಡುವುದು. ಇದೂ ಆಗದಿದ್ದರೆ

೪. ತಾವು ಇರುವ ಕಡೆಗಳಲ್ಲಿಯೇ ಸರ್ವದಾ ಗುರುಪರಂಪರಾನುಸಂಧಾನ ಮಾಡುವುದು ಅದೂ ಆಗದಿದ್ದರೆ

೫. ಸದಾಚಾರ ಸಂಪನ್ನನೂ ಭಗವದ್ಭಕ್ತನೂ ಆದ ಒಬ್ಬ ಶ್ರೀವೈಷ್ಣವನ ಶುಶ್ರೂಷೆ ಮಾಡುವುದು. ಇದೂ ಆಗದಿದ್ದರೆ

೬. ತಿರುನಾರಾಯಣಪುರದಲ್ಲಿ ಒಂದು ಗುಡಿಸಲನ್ನು ಕಟ್ಟಿಕೊಂಡು ವಾಸ ಮಾಡುವುದು.

ಇದೆಲ್ಲವನ್ನೂ ಉಪದೇಶಿಸಿದ ಮೇಲೆ ರಾಮಾನುಜರ ಅಂತ್ಯಕಾಲವು ಸಮೀಪಿಸಲು ಅವರು ದೇವಸ್ಥಾನಕ್ಕೆ ಹೋಗಿ ಶ್ರೀರಂಗನಾಥಸ್ವಾಮಿಯ ದರ್ಶನ ಮಾಡಿ ಪರಾಶರಭಟ್ಟರನ್ನು ತಮ್ಮ ಉತ್ತರಾಧಿಕಾರಿಯಾಗಿ ನಿಯಮಿಸಿದರು. ಶ್ರೀರಂಗನಾಥಸ್ವಾಮಿಯನ್ನು ಧ್ಯಾನ ಮಾಡುತ್ತಾ ಯೋಗಧ್ಯಾನಪರವಶರಾದರು. ಮತ್ತು ಮಾಘ ಶುದ್ಧ ದಶಮಿ ಶನಿವಾರ ಕ್ರಿ. ಶ. 1397 ರಂದು ದೇಹತ್ಯಾಗ ಮಾಡಿ ಪರಮಪದವನ್ನು ಸೇರಿದರು. ಅವರ ಪಾರ್ಥಿವ ಶರೀರವನ್ನು ಅವರ ಶಿಷ್ಯರು ದೇವಸ್ಥಾನದ ಪ್ರಾಕಾರದಲ್ಲೇ ಭೂಸ್ಥಾಪನೆ ಮಾಡಿದರು.

ಇವರು ಶ್ರೀಭಾಷ್ಯ, ವೇದಾಂತಸಾರ, ವೇದಾಂತದೀಪ, ವೇದಾರ್ಥ, ಸಂಗ್ರಹ, ಗೀತಾಭಾಷ್ಯ, ಗದ್ಯತ್ರಯ, ನಿತ್ಯಗ್ರಂಥಾದಿ ಅಮೂಲ್ಯವಾದ ಗ್ರಂಥಗಳನ್ನು ರಚಿಸಿದರು. ಯಾಮುನಾಚಾರ್ಯರು ಗೀತಾರ್ಥ ಸಂಗ್ರಹವಾಗಿ ತಿಳಿಸಿರುವುದನ್ನೆಲ್ಲಾ ಇವರು ತಮ್ಮ ಗೀತಾಭಾಷ್ಯದಲ್ಲಿ ವಿಸ್ತಾರವಾಗಿ ವಿವರಿಸಿ ತಿಳಿಸಿ

ದ್ದಾರೆ. ದಿವ್ಯ ಪ್ರಬಂಧಕ್ಕೆ ತಮ್ಮ ಶಿಷ್ಯರಿಂದ ವ್ಯಾಖ್ಯಾನ ಬರೆಸಿ ಅದನ್ನು ಪರಿಶೀಲಿಸಿದ್ದಾರೆ. ಈ ಗ್ರಂಥಗಳೆಲ್ಲಾ ಶ್ರೀವೈಷ್ಣವರಿಗೆ ದಾರಿದೀಪವಾಗಿ ಪ್ರಕಾಶಿಸುತ್ತಿವೆ. ಪಾಂಚರಾತ್ರ ಆಗಮಗಳ ಪ್ರಮಾಣವನ್ನು ಇವರು ಸ್ಥಾಪನೆ ಮಾಡಿದರು. ದೇವಸ್ಥಾನಗಳನ್ನು ಪುನರುಜ್ಜೀವನ ಮಾಡಿ ಅದರ ಪೂಜಾ ಕ್ರಮಗಳನ್ನೆಲ್ಲಾ ವ್ಯವಸ್ಥೆ ಮಾಡಿದರು. ಮೋಕ್ಷವನ್ನು ಪಡೆಯಲು ಪ್ರಪತ್ತಿಯೇ ಉಪಾಯ ಎಂಬುದನ್ನು ಎಲ್ಲರಿಗೂ ಬೋಧಿಸಿದರು. ಆಸೇತು ಹಿಮಾಚಲದವರೆಗೆ ಯಾತ್ರೆ ಮಾಡಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು, ಶ್ರೀ ವೈಷ್ಣವ ಮತದ ತತ್ವಗಳನ್ನು ಪ್ರಚಾರ ಮಾಡಿ ಅನೇಕರನ್ನು ತಮ್ಮ ಮತಕ್ಕೆ ಸೇರಿಸಿಕೊಂಡರು. ಹೀಗೆ ರಾಮಾನುಜರು ೧೨೦ ವರ್ಷಗಳು (ಕ್ರಿ.ಶ. ೧೦೧೭–೧೧೩೭) ಬಾಳಿ ಲೋಕೋಪಕಾರ ಮಾಡಿ ಮಹಾಪುರುಷರೆನಿಕೊಂಡು ಅಮರರಾದರು.

"ಯೋನಿತ್ಯಮಚ್ಯುತ ಪದಾಂಬುಜಯುಗ್ಮರುಕ್ಮ
ವ್ಯಾಮೋಹತಸ್ತದಿತರಾಣಿತೃಣಾಯಮೇನೇ
ಅಸ್ಮದ್ಗುರೋರ್ಭಗವತೋಸ್ಯದಯೈಕ ಸಿಂಧೋಃ
ರಾಮಾನುಜಸ್ಯ ಚರಣೌತರಣಂ ಪ್ರಪದ್ಯೇ"

ಶ್ರೀಮತೇ ರಾಮಾನುಜಾಯ ನಮಃ

। ರಾಮಾನುಜಾರ್ಯ ದಿವ್ಯಾಜ್ಞಾ ವರ್ಧತಾಂ ಅಭಿವರ್ಧತಾಂ ।

ನಚೇತ್ ರಾಮಾನುಜೇತ್ಯೇಷಾಚತುರಾಚತುರಾಕ್ಷರೀ ।
ಕಾಮವಸ್ಥಾಂ ಪ್ರಪದ್ಯಂತೇ ಜನ್ತವೋಹನ್ತ ಮಾದೃಶಃ॥

ರಾಮಾನುಜ ಎಂಬ ಈ ನಾಲ್ಕು ಅಕ್ಷರವು ಇಲ್ಲದಿದ್ದರೆ ನಮ್ಮಂತಹ ಚೇತನರು ಯಾವ ಅವಸ್ಥೆಯನ್ನು ಹೊಂದುತ್ತಿದ್ದೆವೋ?

ಶ್ರೀ ರಾಮಾನುಜರು ನವಗ್ರಂಥಗಳನ್ನು ಬರೆದಿರುತ್ತಾರೆ. ಆಸೇತು ಹಿಮಾಚಲ ಯಾತ್ರೆಮಾಡಿ ಸಿದ್ಧಾಂತವನ್ನು ಪ್ರಚಾರಮಾಡಿ ಆದರ್ಶ ಮತ ಪ್ರವರ್ತಕರಾಗಿದ್ದಾರೆ. ಸಂಸ್ಕೃತದಲ್ಲಿ ಬರೆದಿರುವ 9 ಗ್ರಂಥಗಳು ಅದ್ಭುತವಾದ ಪ್ರೌಢ ಗ್ರಂಥಗಳಾಗಿವೆ.

ಬ್ರಹ್ಮಸೂತ್ರಕ್ಕೆ ವ್ಯಾಖ್ಯಾನರೂಪವಾಗಿ ವಿಶಿಷ್ಟಾದ್ವೈತ ಪರವಾದ ವಿಶಾಲ ಗ್ರಂಥವನ್ನು ಬರೆದಿದ್ದಾರೆ. ಇದಕ್ಕೆ 'ಶಾರೀರಕಮೀಮಾಂಸಾಭಾಷ್ಯ' ಅಥವಾ **'ಶ್ರೀಭಾಷ್ಯ'** ಎಂದು ಅನ್ವರ್ಥ ನಾಮವಿದೆ. ಇದರಂತೆಯೇ ಬ್ರಹ್ಮಸೂತ್ರ ಭಾಷ್ಯಕ್ಕೆ ಸಂಗ್ರಹವಾಗಿ ವೇದಾಂತ ದೀಪ, ವೇದಾಂತಸಾರ ಎಂಬ ಹೆಸರಿನಿಂದ ಭಾಷ್ಯವನ್ನು ಬರೆದಿರುತ್ತಾರೆ.

ಇವರು ಉಪನಿಷತ್ ಸಂಗ್ರಹಾರ್ಥ ಉಪನ್ಯಾಸರೂಪವಾಗಿ' ವೇದಾರ್ಥ ಸಂಗ್ರಹ' ಎಂಬ ಗ್ರಂಥವನ್ನು ರಚಿಸಿರುತ್ತಾರೆ. ಇದರಿಂದ ಇವರು ಪ್ರತ್ಯೇಕ ಉಪನಿಷತ್ ಭಾಷ್ಯ ಬರೆಯುವ ಅವಶ್ಯಕತೆ ಇರಲಿಲ್ಲ ಎಂಬುದು ತಿಳಿಯುತ್ತದೆ. ಭಗವದ್ಗೀತೆಗೆ ಸರಳವಾದ ಭಾಷ್ಯವನ್ನು ಯಾಮುನಾಚಾರ್ಯರ ಗೀತಾರ್ಥ ಸಂಗ್ರಹವನ್ನನುಸರಿಸಿ 'ಗೀತಾಭಾಷ್ಯಂ' ಬರೆದಿರುತ್ತಾರೆ. ಇದು ಸಾಮಾನ್ಯ ಜನರೂ ಅರ್ಥಮಾಡಿಕೊಳ್ಳಬಹುದಾಗಿರುತ್ತದೆ. ಗದ್ಯತ್ರಯ ಇದು ಒಂದು ಅದ್ಭುತ ಗ್ರಂಥ. ಇದು ಪರಮಾತ್ಮನ ಹಾಗೂ ಶ್ರೀ ರಾಮಾನುಜರ ಸಂವಾದ ಗಳಿಂದ ಕೂಡಿದೆ. ಶರಣಾಗತಿ ಗದ್ಯದಲ್ಲಿ ಶರಣಾಗತಿ ರೂಪದಲ್ಲಿ ಅವನ ಸಂಪ್ರಾಪ್ತಿಯನ್ನು ಹೇಳಿದರೆ ಶ್ರೀರಂಗ ಗದ್ಯದಲ್ಲಿ ಶ್ರೀರಂಗನಾಥ ನಮೋ ಸ್ತುತೇ ಎಂದು ಶ್ರೀರಂಗನಾಥನ ಸ್ತೋತ್ರ ಮಾಡಿರುತ್ತಾರೆ. ಮುಂದೆ ಶ್ರೀ ವೈಕುಂಠ ಗದ್ಯದಲ್ಲಿ ಇವರು ಸಾಕ್ಷಾತ್ತಾಗಿ ವೈಕುಂಠ ಸುಖವನ್ನು ಅನುಭವಿಸಿ ಪರಮಾತ್ಮ ಅನುಗ್ರಹದಿಂದ ಅವನ ವೈಭವವನ್ನು ಭೂಲೋಕದಲ್ಲಿ ಸಾರಲು ಅವತಾರ ಮಾಡಿದವರೆಂದು ತಿಳಿಯುತ್ತದೆ. 'ಅನಂತಃ ಪ್ರಥಮಂ ರೂಪಂ ಲಕ್ಷ್ಮಣಸ್ತು ತತಃ ಪರಂ ಬಲಭದ್ರಃತೃತೀಯಸ್ತು ಕಲಾಕಶ್ಚಿತ್ ಭವಿಷ್ಯತಿ' ಎಂಬ ಪದ್ಯವನ್ನು ಸಾರ್ಥಕಪಡಿಸುತ್ತದೆ. ನಿತ್ಯ ಗ್ರಂಥದಲ್ಲಿ ಪರಮಾತ್ಮನ ಅರ್ಚಾವತಾರದಲ್ಲಿ ಅನುಗ್ರಹ ಪಡೆಯಲು ಆರಾಧನರೂಪವಾದ ನಿತ್ಯಕೈಂಕರ್ಯಕ್ರಮವನ್ನು ತಿಳಿಸ ಲಾಗಿದೆ. ಹೀಗೆ ನವರತ್ನಗಳನ್ನು ರಚಿಸಿ ಸಮಸ್ತಲೋಕಗಳಲ್ಲಿಯೂ ವಿರಾಜ ಮಾನರಾಗಿದ್ದಾರೆ.

ಎಂಬೆರುಮಾನಾರ್ ತಿರುವಡಿಗಳೇ ಶರಣಂ